ಸಂಪುಟ 01 | ಸಂಚಿಕೆ 25 | ಶುಕ್ರವಾರ 05 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಅಂತರರಾಷ್ಟ್ರೀಯ ಸ್ವಯಂಸೇವಕರ ದಿನ (International Volunteer Day IVD) ವಿಶ್ವಸಂಸ್ಥೆಯ ಮೂಲಕ ಘೋಷಿಸಲಾದ ಈ ದಿನವು ಸಮಾಜ, ಸಮುದಾಯ ಮತ್ತು ವಿಶ್ವಕ್ಕಾಗಿ ತಮ್ಮ ಸಮಯ ಹಾಗೂ ಶ್ರಮವನ್ನು ಕೊಡುಗೆಯಾಗಿ ನೀಡುವ ಸ್ವಯಂಸೇವಕರಿಗೆ ಗೌರವ ಸಲ್ಲಿಸಲು ಆಚರಿಸಲಾಗುತ್ತದೆ. ವಿಪತ್ತು ನಿರ್ವಹಣೆ, ಸಾಮಾಜಿಕ ಸೇವೆ, ಆರೋಗ್ಯ, ಪರಿಸರ ರಕ್ಷಣಾ ಚಟುವಟಿಕೆಗಳಲ್ಲಿ ಸ್ವಯಂಸೇವಕರ ಪಾತ್ರವನ್ನು ಗುರುತಿಸಲಾಗುತ್ತದೆ.

2) ವಿಶ್ವ ಮಣ್ಣಿನ ದಿನ (World Soil Day) ಮಣ್ಣಿನ ಮಹತ್ವ, ಅದರ ಆರೋಗ್ಯ ಮತ್ತು ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುವ ದಿನ. ಆಹಾರ ಭದ್ರತೆ, ಪರಿಸರದ ಸ್ಥಿರತೆ ಮತ್ತು ಕೃಷಿಕಾ ಉತ್ಪಾದನೆಯಲ್ಲಿ ಮಣ್ಣಿನ ಪ್ರಮುಖ ಪಾತ್ರವನ್ನು ನೆನಪಿಸುತ್ತದೆ. ಪ್ರತಿ ವರ್ಷ ಈಂಓ (Food and Agriculture Organization) ವಿಶೇಷ ಥೀಮ್ ಘೋಷಿಸುತ್ತದೆ.

3) ಥೈಲ್ಯಾಂಡ್ ರಾಜ ಭೂಮಿಬೋಲ್ ಸ್ಮರಣಾ ದಿನ / Father's Day (Thailand National Father's Day) ಥೈಲ್ಯಾಂಡ್‌ನ ಮೂರನೇವಾದ ರಾಜ ಭೂಮಿಬೋಲ್ ಅಡೂಲ್ಯಾದೇಜ್ ಅವರ ಜನ್ಮದಿನ ಆಚರಣೆ.ದೇಶಾದ್ಯಂತ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳು ನಡೆಯುತ್ತವೆ. ಇದನ್ನು ಥೈಲ್ಯಾಂಡ್‌ನ ರಾಷ್ಟ್ರೀಯ ತಂದೆಯ ದಿನವಾಗಿಯೂ ಆಚರಿಸಲಾಗುತ್ತದೆ.

## ಸುಭಾಷಿತ

ಕೋಪಗೊಳ್ಳುವುದಕ್ಕಿಂತ ಅಳುವುದು ಉತ್ತಮ. ಕೋಪ ಇತರರನ್ನು ನೋಯಿಸುತ್ತದೆ. ಅಳು ನಮ್ಮ ಹೃದಯವನ್ನು ನಿರ್ಮಲಗೊಳಿಸುತ್ತದೆ.

ಎರಡನೇ ಪೋಪ್ ಜಾನ್ ಪಾಲ್

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಕಾಂಗ್ರೆಸ್ ಹೈಕಮಾಂಡ್‌ಗೆ ವರದಿ ನೀಡಿದ ಡಿಕೆಶಿ

# ಸಚಿವರು ಶಾಸಕರಲ್ಲಿ ನಡುಕ

ಬೆಂಗಳೂರು: ಇತ್ತೀಚಿನ ರಾಜಕೀಯ ಬೆಳವಣಿಗೆಗಳಲ್ಲಿ ಸಿದ್ದರಾಮಯ್ಯ ಅವರ ಗುಂಪಿನಲ್ಲಿ ಕಾಣಿಸಿಕೊಂಡು, ತಮಗೆ ಎದುರಾಗಿ ನಿಂತಿರುವ ಸಚಿವರ ಮತ್ತು ಶಾಸಕರ ವಿರುದ್ಧ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಾಂಗ್ರೆಸ್ ಹೈಕಮಾಂಡ್‌ಗೆ ವರದಿ ನೀಡಿದ್ದಾರೆ.

ನಿನ್ನೆ ದೆಹಲಿಗೆ ಭೇಟಿ ನೀಡಿದ್ದ ಡಿ.ಕೆ.ಶಿವಕುಮಾರ್ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಅದರಲ್ಲೂ ಸಂಘಟನಾತಕ ಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳುವ ಮತ್ತು ಅದರ ಬಗ್ಗೆ ಕಾಲಕಾಲಕ್ಕೆ ವರದಿ ಪಡೆಯುವ ಎಐಸಿಸಿ ಪ್ರಧಾನ ಕಾರ್ಯದರ್ಶಿಯವರನ್ನೇ ಭೇಟಿ ಮಾಡಿ ವರದಿ ನೀಡಿದ್ದಾರೆ. ಪಕ್ಷದ ಸಂಘಟನಾತಕ ಚಟುವಟಿಕೆಗಳಲ್ಲಿ ಸಹಕರಿಸದ ಶಾಸಕರು ಮತ್ತು ಸಚಿವರ ಪಟ್ಟಿಯನ್ನು ಹೈಕಮಾಂಡ್‌ಗೆ ಸಲ್ಲಿಸಿದ್ದು, ಇವರು ಪಕ್ಷದಿಂದ ಲಾಭ ಪಡೆದಿದ್ದಾರೆ.


ಆದರೆ ಪಕ್ಷಕ್ಕೆ ಅವರ ಕೊಡುಗೆ ನಿರಾಶಾದಾಯಕ ಎಂದು ಆಕ್ಷೇಪಿಸಿದ್ದಾರೆ ಎನ್ನಲಾಗಿದೆ.ಈ ಹಿಂದೆ ಮತಗಳ್ಳತನದ ವಿರುದ್ಧ



ಪ್ರತಿಭಟನೆ ನಡೆಸಿದಾಗ, ಸದಸ್ಯತ್ವ ನೋಂದಣಿ ಸೇರಿದಂತೆ ಕಾಂಗ್ರೆಸ್ ವತಿಯಿಂದ ಹಲವಾರು ಕಾರ್ಯಕ್ರಮಗಳನ್ನು ರೂಪಿಸಲಾಗಿತ್ತು. ಅದರಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಪಕ್ಷ ಸಂಘಟನೆಗೆ ಬೆಂಬಲಿಸಬೇಕು ಎಂದು ವರಿಷ್ಠ ನಾಯಕರು ಪಕ್ಷದ ಶಾಸಕರು ಮತ್ತು ಸಚಿವರಿಗೆ ಸೂಚನೆ ನೀಡಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಣದಲ್ಲಿ ಗುರುತಿಸಿಕೊಂಡಿರುವ ಬಹಳಷ್ಟು ಮಂದಿ ಶಾಸಕರು ಮತ್ತು ಸಚಿವರು ಪಕ್ಷದ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳದೆ ಅನಾದರಣೆ ತೋರಿಸಿದ್ದಾರೆ ಎಂಬ ಆರೋಪ ಮಾಡಲಾಗಿದೆ. ಇಂತಹ ಉಡಾಫೆಯ ಶಾಸಕರು ಹಾಗೂ ಸಚಿವರಿಗೆ ಹಲವು ಬಾರಿ ಎಚ್ಚರಿಕೆ ನೀಡಲಾಗಿತ್ತು. ಆದ-'ರೂ ಅದನ್ನು ಲೆಕ್ಕಿಸದೆ ಶಾಸಕರು, ಸಚಿವರು ತಮ ಧೋರಣೆಯನ್ನು ಮುಂದುವರಿಸಿದ್ದಾರೆ.

ಮುಂದಿನ ಸಚಿವ ಸಂಪುಟ ಪುನರ್ ರಚನೆಯ ವೇಳೆಯಲ್ಲಿ ಅಂತಹವರನ್ನು ಕೈಬಿಡಬೇಕು. ಶಾಸಕರಿಗೆ ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಬಾರದು ಎಂದು ಮನವಿ ಮಾಡಿರುವುದಾಗಿ ತಿಳಿದು ಬಂದಿದೆ. ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ಪಟ್ಟಿ ಸಂಪುಟದಲ್ಲಿನ ಬಹಳಷ್ಟು ಸಚಿವರಿಗೆ ನಡುಕ ಹುಟ್ಟಿಸಿದೆ. ಸಚಿವ ಸಂಪುಟ ವಿಸ್ತರಣೆಯಾಗಲೇಬೇಕು ಎಂದು ಸಿದ್ದರಾಮಯ್ಯ ಪಟ್ಟು ಹಿಡಿದಿದ್ದರೆ, ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ಪಟ್ಟಿ ಬ್ರಹಾಸ್ತ್ರವಾಗಲಿದೆ. ಸುಮಾರು 20ಕ್ಕೂ ಹೆಚ್ಚು ಮಂದಿ ಸಚಿವರನ್ನು ವಜಾ ಗೊಳಿಸುವ ಪರಿಸ್ಥಿತಿ ಎದುರಾಗಲಿದೆ ಎಂದು ಹೇಳಲಾಗಿದೆ. ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ಪಟ್ಟಿಯಲ್ಲಿ ಪ್ರಭಾವಿ ಮತ್ತು ಸಿದ್ದರಾಮಯ್ಯ ಅವರ ಆಪ್ತ ಸಚಿವರ ಹೆಸರುಗಳಿವೆ ಎನ್ನಲಾಗುತ್ತಿದೆ.

## ಅಂಬಾಮಠ ಅಭಿವೃದ್ಧಿ ಕಾಮಗಾರಿ ಭೂಮಿ ಪೂಜೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜ 3 ಕ್ಕೆ ಆಗಮನ ಶಾಸಕ ಹಂಪನಗೌಡ ಬಾದರ್ಲಿ



ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ಅಂಬಾಮಠಕ್ಕೆ ವಿವಿಧ ಅಭಿವೃದ್ಧಿ ಕಾಮಗಾರಿ ಗಳ ಭೂಮಿ ಪೂಜೆ ಹಾಗೂ ಲೋಕಾರ್ಪಣೆ ಕಾರ್ಯಕ್ರಮದ ನಿಮಿತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗಮಿಸಲಿದ್ದಾರೆಂದು ಎಂದು ಶಾಸಕ ಹಂಪನಗೌಡ ಬಾದರ್ಲಿ ತಿಳಿಸಿದರು.

ಗುರುವಾರ ಬೆಳಿಗ್ಗೆ ಅಂಬಾ ಮಠದಲ್ಲಿ ಜಾತ್ರೆ ನಿಮಿತ್ತ ಪೂರ್ವ ಸಭೆ ನಡೆಸಿ ರಾಜ್ಯದ ಧರ್ಮಸ್ಥಳ,ಹಾಸನಾಂಬೆ ಮಾದರಿಯಲ್ಲಿ ದೇವಸ್ಥಾನ ಜೀರ್ಣೋದ್ಧಾರ .ಲೈಟಿಂಗ್. ಚರಂಡಿ .ಫುಟ್ ಪಾತ್ ರಥ ಬೀದಿ,ಶೌಚಾಲಯ ,ಪ್ರಸಾದ ನಿಲಯ, ಆಸ್ಪತ್ರೆ, ಪೊಲೀಸ್ ಠಾಣೆ, ಬಯಲು ಮಂದಿರ ಸೇರಿದಂತೆ ಕೆ.ಆರ್.ಐ.ಡಿ.ಎಲ್ ಹಾಗೂ ಕೆ.ಕೆ. ಆರ್.ಡಿ.ಬಿ ಅನುದಾನದಲ್ಲಿ ಅಭಿವೃದ್ಧಿ ಪಡಿಸಲಾಗುತ್ತದೆ. ದೇವಸ್ಥಾನ ಕಟ್ಟಡ 6 ಕೋಟಿ 63 ಲಕ್ಷ ರೂ ಸಂಪೂರ್ಣ ಅಭಿವೃದ್ಧಿ ಪಡಿಸಿ ದೇಶದಲ್ಲಿ ಮಾದರಿಯ ರೀತಿಯಲ್ಲಿ ಅಭಿವೃದ್ಧಿ ಪಡಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಹಣ ದುರುಪಯೋಗ ಆರೋಪ ಶುದ್ದ ಸುಳ್ಳು. ದೇವಸ್ಥಾನ ಪವಿತ್ರ ಸ್ಥಳ ಯಾವುದೇ ಕಾರಣಕ್ಕೆ ಒಂದು ನಯಾಪೈಸೆ ದುರುಪಯೋಗ ಆಗಿಲ್ಲ.

ದೇವಸ್ಥಾನದ ಶ್ರೀ ಚಕ್ರ ಪವಿತ್ರತೆ ಉಳಿಯಬೇಕು ಎಂದು ಅರ್ಚಕರು ಹೇಳಿದ ಕಾರಣ ಅದನ್ನು ಅಲ್ಲಿಯೇ ಉಳಿಸಲಾಗಿದೆ.ಕಟ್ಟಿದ ದೇವಸ್ಥಾನದ ಕಟ್ಟಡ ತೆರವುಗೊಳಿಸಿಲ್ಲ ಎಂದರು. ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ ಮಾತನಾಡಿ ವಾಸ್ತು. ಆಯಾ. ಮುಜರಾಯಿ ಇಲಾಖೆ ಅಭಿಪ್ರಾಯ ಒಳಗೊಂಡು ದೇವಸ್ಥಾನ ನಿರ್ಮಾಣ ಆಗಬೇಕಾಗಿದೆ. ಇದರಲ್ಲಿ ರಾಜಕೀಯ ಬಣ್ಣ ಬಳಿಯಬಾರದು. ಶಾಸ್ತ್ರ ಬದ್ದವಾಗಿ ಕಟ್ಟಿ ಪ್ರವಾಸಿ ತಾಣವಾಗಿ ಭಕ್ತರಿಂದ ಆಕರ್ಷಣೆಗೊಳಿಸಬೇಕು ಎಂದರು. ಈಸಂದರ್ಭದಲ್ಲಿ ಮಾಜಿ ಜಿಲ್ಲಾಪಂಚಾಯತ ಸದಸ್ಯ ಬಸವರಾಜ ಹಿರೇಗೌಡ.ಎನ್. ಅಮರೇಶ.ರಾಜುಗೌಡ.ದೇವಸ್ಥಾನ ಸಮತಿ ಅಧ್ಯಕ್ಷ ರಂಗನಗೌಡ ಗೋರೆಬಾಳ,ಸ್ತ್ರೀ ಶಕ್ತಿ ತಾಲೂಕ ಘಟಕ ಅಧ್ಯಕ್ಷ ಶ್ರೀ ದೇವಿ ಶ್ರೀನಿವಾಸ,ತಹಶಿಲ್ದಾರ ಅರುಣ್ ಕುಮಾರ್ ದೇಸಾಯಿ.ಇಒ ಚಂದ್ರಶೇಖರ. ಪೌರಾಯುಕ್ತ ಪಾಂಡುರಂಗ ಇಟಗಿ ಸೇರಿದಂತೆ ವಿವಿಧ ಇಲಾಖೆ ಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ರಾಷ್ಟ್ರೀಯ ಅತ್ಯುತ್ತಮ 3 ನೇ ಪೊಲೀಸ್ ಠಾಣೆ ಪ್ರಶಸ್ತಿ ಪಡೆದ ಕವಿತಾಳ ಠಾಣೆಯ ಪಿಎಸ್ ಐ ಗುರುಚಂದ್ರಯಾದವ ಅವರಿಗೆ ಸನ್ಮಾನ



ನೈಜ್ಯ ದೆಸೆ ನ್ಯೂಸ್

ಸಿರವಾರ: ರಾಷ್ಟ್ರೀಯ ಅತ್ಯುತ್ತಮ 3 ನೇ ಪೊಲೀಸ್ ಠಾಣೆ ಪ್ರಶಸ್ತಿ ಪಡೆದ ಕವಿತಾಳ ಠಾಣೆಯ ಪಿಎಸ್ ಐ ಗುರುಚಂದ್ರಯಾದವ ಅವರಿಗೆ ಕಾಂಗ್ರೇಸ್ ಯುವ ಮುಖಂಡರಾದ ರಮೇಶ ದರ್ಶನಕರ್, ಪ.ಪಂಚಾಯತಿ ಸದಸ್ಯರಾದ ಹಸೇನ ಅಲಿಸಾಬ್, ಹೆಚ್.ಕೆ.ರಾಘು ಸೇರಿದಂತೆ ಇನ್ನಿತರರು ಸನ್ಮಾನಿಸಿ ಗೌರವಿಸಿದರು



ನೈಜ್ಯ ದೆಸೆ ನ್ಯೂಸ್

ಕಸಬಾ ಲಿಂಗಸುಗೂರ ಪಟ್ಟಣದ ಶ್ರೀ ಕುಪ್ಪಿ ಭೀಮ ದೇವರ ಜಾತ್ರೆ ಶತಮಾನತ್ಸವದ ಅಂಗವಾಗಿ ಹೆಲಿಕ್ಯಾಪ್ಟರ ಮುಖಾಂತರ ರಥೋತ್ಸವಕ್ಕೆ ಪುಷ್ಪ ಹಾಕುವ ದೃಶ್ಯ

# ರೂಪಾಯಿ ಮೌಲ್ಯ ಕುಸಿತ :ಕೇಂದ್ರಕ್ಕೆ ಖರ್ಗೆ ತರಾಟೆ

ನೈಜ್ಯ ದೆಸೆ ನ್ಯೂಸ್

ನವದೆಹಲಿ: ಅಮೆರಿಕದ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ಸಾರ್ವಕಾಲಿಕ ಕುಸಿತ ಕಂಡಿದ್ದು, ಜಗತ್ತಿನಲ್ಲಿ ಭಾರತ ರೂಪಾಯಿಗೆ ಯಾವುದೇ ಮೌಲ್ಯ ಇಲ್ಲದಂತಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅವರು ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಕೇಂದ್ರದ ಆರ್ಥಿಕ ನೀತಿಗಳ ಪರಿಣಾಮ ರೂಪಾಯಿ ಮೌಲಗಯ ದಾಖಲೆ ಕುಸಿತ ಕಂಡಿದೆ. ಸರ್ಕಾರದ ನೀತಿಗಳು ರೂಪಾಯಿಯನ್ನು ದುರ್ಬಲಗೊಳಿಸಿವೆ. ಭಾರತದ ರೂಪಾಯಿಗಳು ಜಗತ್ತಿ ನಲ್ಲಿ ಯಾವುದೇ ಮೌಲ್ಯ ಹೊಂದಿಲ್ಲ ಎಂದು ಆರೋಪಿಸಿದ್ದಾರೆ. ಸುದ್ದಿಗಾರೊಂದಿಗೆ ಮಾತನಾಡಿದ ಅವರು ಕೇಂದ್ರ ನೀತಿಗಳಿಂದಾ ಗಿ ರೂಪಾಯಿ ಮೌಲ್ಯ ಕುಸಿತ ಕಂಡಿದೆ. ಅವರ ನೀತಿಗಳು ಉತ್ತಮವಾಗಿದ್ದರೆ, ರೂಪಾಯಿ ಮೌಲ್ಯ ಹೆಚ್ಚಾಗಬೇಕಿತ್ತು. ದೇಶದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲ ಎಂಬುದನ್ನು ತೋರಿಸಿದೆ. ಏನು ಬೇಕಾದರೂ ಹೇಳಬಹುದು.

ನಮ್ಮನ್ನು ಹೊಗಳಿಕೊಳ್ಳ ಬಹುದು, ಆದರೆ ಇದು ನಮ್ಮ ರೂಪಾಯಿ ಜಗತ್ತಿನಲ್ಲಿ ಯಾವುದೇ ಮೌಲ್ಯವಿಲ್ಲ ಎಂದು ತೋರಿಸಿದೆ ಎಂದು ವಾಗ್ದಾಳಿ ನಡೆಸಿದ್ದಾರೆ. 2025ರಲ್ಲಿ ಏಷ್ಯಾದ ಅತ್ಯಂತ ಕಳಪೆ ಪ್ರದರ್ಶನ ನೀಡಿರುವ ಕರೆನ್ಸಿಯಲ್ಲಿ ಭಾರತದ ರೂಪಾಯಿ ಒಂದಾಗಿದೆ. ರೂಪಾಯಿ ಮೌಲ್ಯ ಡಾಲರ್ ಎದುರು 4 ರಿಂದ 5ರಷ್ಟು ಕುಸಿದಿದ್ದು, ಇಂದು



ರೂಪಾಯಿ ಮೌಲ್ಯ ಡಾಲರ್ ಎದುರು 90.20ರ ಅಸುಪಾಸಿ ನಲ್ಲಿದೆ ಎಂದಿದ್ದಾರೆ.

**ವ್ಯಂಗ್ಯವಾಡಿದ ಮನೀಶ್ ತಿವಾರಿ:** 2013ರ ಹೇಳಿಕೆ ಉಲ್ಲೇಖಿಸಿ ತಿರುಗೇಟು: ಈ ಹಿಂದೆ ಯುಪಿಎ ಸರ್ಕಾರದ ಆಡಳಿತದಲ್ಲಿ ರೂಪಾಯಿ ಮೌಲ್ಯ ಕುಸಿದಾಗ ಬಿಜೆಪಿ ಟೀಕಿಸಿದ್ದನ್ನು ಉಲ್ಲೇಖಿಸಿ ಮಾತನಾಡಿದ ಕಾಂಗ್ರೆಸ್ ಸಂಸದ ಮನೀಶ್ ತಿವಾರಿ, ಸದ್ಯ ರೂಪಾಯಿ ಮೌಲ್ಯದ ಕುಸಿತವು ಪ್ರಧಾನಿ ನರೇಂದ್ರ ಮೋದಿಯವರ ವಯಸ್ಸನ್ನೂ ಮೀರಿದೆ ಎಂದು ವ್ಯಂಗ್ಯವಾಡಿದ್ದಾರೆ. 2013ರಲ್ಲಿ ರೂಪಾಯಿ ಮೌಲ್ಯ ಕುಸಿತಗೊಂಡ ಕಾರಣ ಯುಪಿಎ ಸರ್ಕಾರದ ವಿರುದ್ಧ ಹರಿಹಾಯ್ದಿದ್ದ ಬಿಜೆಪಿ ವಕ್ತಾರ ರವಿ ಶಂಕರ್ ಪ್ರಸಾದ್, ಯುಪಿಎ ಅಧಿಕಾರಕ್ಕೆ ಬಂದಾಗ ಡಾಲರ್ ಎದುರು ಭಾರತೀಯ ರೂಪಾಯಿ ಮೌಲ್ಯ ರಾಹುಲ್ ಗಾಂಧಿಯ ವರ ವಯಸ್ಸಿಗೆ ಸಮನಾಗಿತ್ತು. ಇಂದು ಅದು ಸೋನಿಯಾ ಗಾಂಧಿಯವರ ವಯಸ್ಸಿಗೆ ಸಮನಾಗಿದೆ. ಶೀಘ್ರದಲ್ಲೇ ಅದು ಮನಮೋಹನ್ ಸಿಂಗ್ ಅವರ ವಯಸ್ಸನ್ನು ಮುಟ್ಟುತ್ತದೆ ಎಂದು ಕುಟುಕಿದ್ದರು.

**ಪ್ರಿಯಾಂಕ ಪ್ರಶ್ನೆ**

ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದ ಅವಧಿಯಲ್ಲಿ ವಯಸ್ಸಿಗೆ ಹೋಲಿಸಿ ಮಾತನಾಡಿದ್ದ ಬಿಜೆಪಿ ನಾಯಕರು ಈಗ ಏನು ಹೇಳ್ತಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹಾಗು ಸಂಸದೆ ಪ್ರಿಯಾಂಕ ಗಾಂದಿ ಪ್ರಶ್ನಿಸಿದ್ದಾರೆ. ರೂಪಾಯಿ ಮೌಲ್ಯ ಕುಸಿತದ ಕುರಿತು ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು ಮನಮೋಹನ್ ಸಿಂಗ್ ಸರ್ಕಾರದ ಅವಧಿಯಲ್ಲಿ ರೂಪಾಯಿ ಮೌಲ್ಯ ಕುಸಿತಗೊಂಡಾಗ ಅವರು ಏನು ಹೇಳಿದ್ದರು ಎಂದು ಪ್ರಶ್ನಿಸಿದ್ದಾರೆ.

## ಸಾಹಿತ್ಯ ಸಿಂಚನ

ಭಿಕ್ಷೆ ತೀರಿತೇನೆ
ರಚನೆ

ನೇಣು ಏಣಿಗೆ ಪೋಟಿ
ಕೋಣ ಬಂದೀತೇನೆ
ಬಣ್ಣ ಸುಣ್ಣದಿ ಚಿತ್ತ
ಕಣ್ಣು ಹಾದೀತೇನೆ

ಅಂಗ ಸಂಗದ ರುಚಿಗೆ
ಹೀಂಗ ಬಂದಿಯೇನೆ
ಕಂಗು ಸಿಂಗದ ಗುಟ್ಟ
ತಂಗಿ ಹೇಳುವೆಯೇನೆ

ಹಾಲು ಶೂಲವೆ ಬಾಲಿ
ಬೇಲಿ ಆಗಿದೆಯಲ್ಲೆ
ಕಾಲ ನೆಲದಿ ತಳಕು
ಚೀಲ ಕೊಳೆತಿದೆಯಲ್ಲೆ

ಏಳು ಬೀಳನು ದಾಟಿ
ಕಾಳಿಗಂಜಿದೆಯೇನೆ
ಕೂಳು ಚೋಳಾಗಲು
ಸೀಳಿ ಹೋದೆಯೇನೆ

ಅಕ್ಷಿ ಸಾಕ್ಷಿಗೆ ಮಥನ
ಮೋಕ್ಷ ಉಂಟೇನೆ
ರಕ್ಷೆ ಶಿಕ್ಷಗೆ ನಿಲ್ಲು
ಭಿಕ್ಷೆ ತೀರಿತೇನೆ

ತುಳಸಿದಾಸ ಬಿ ಎಸ್

# ಬಳಗಾನೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಮಹಿಳಾ ಕ್ಷೇಮಾ ತಪಾಸಣೆ ಶಿಬಿರ

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ: ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಪ್ರಾಥ-'ಮಿಕ ಆರೋಗ್ಯ ಕೇಂದ್ರ ಬಳಗಾನೂರು ಮತ್ತು ಪಿಪಿಎಚ್‌ಎಫ್, ಪ್ರಣಾ ಯೋಜನೆ ,ಜಿಇ ಹೆಲ್ತ್‌ಕೇರ್ ಸಂಯುಕ್ತಾಶ್ರಯದಲ್ಲಿ ಜಂಟಿಯಾಗಿ ಉಚಿತ ಮಹಿಳಾ ಆರೋಗ್ಯ ತಪಾಸಣಾ ಶಿಬಿರವನ್ನು ಡಾ.ದೌಲಸಾಬ್ ಆಯುಶ್ ವೈದ್ಯಾಧಿಕಾರಿ ಬುಧವಾರ ಉದ್ಘಾಟಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ಆಯುಶ್ ವೈದ್ಯಾಧಿಕಾರಿ ಡಾ.ದೌಲಸಾಬ್ ಉದ್ಘಾಟಿಸಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಾಗೂ ಆರೋಗ್ಯ ಶಿಕ್ಷಣ ಕಾರ್ಯಕ್ರಮವಾದ ಪೀಪಲ್ ಟು ಪೀಪಲ್ ಹೆಲ್ತ್ ಫೌಂಡೇಶನ್ ಜಿ ಇ ಹೆಲ್ತ್ ಕೇರ್ ಇವರ ಸಂಯುಕ್ತಆಶ್ರಯದಲ್ಲಿ ಉಚಿತ ಆರೋಗ್ಯ ಶಿಬಿರದಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಬಿಪಿ ಶುಗರ್ ತಪಾಸಣೆ, ಎಚ್ ಬಿ ತಪಾಸಣೆ, ಕಣ್ಣು ತಪಾಸಣೆ, ಹಲ್ಲು ತಪಾಸಣೆ, ಪೌಷ್ಟಿಕ ಆಹಾರದ ಬಗ್ಗೆ ಮಾಹಿತಿ, ಸ್ತ್ರೀ ರೋಗ



ತಜ್ಞರಿಂದ ಮಹಿಳಾ ತಪಾಸಣೆ, ಮಾನಸಿಕ ಆರೋಗ್ಯದ ಬಗ್ಗೆ ಮಾಹಿತಿ ಮತ್ತು ಆಪ್ತ ಸಮಾಲೋಚನೆ, ಮತ್ತು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತು ಉಚಿತವಾಗಿ ಆರೋಗ್ಯ ಶಿಕ್ಷಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಈ ಒಂದು ಕಾರ್ಯಕ್ರಮದ ಸದುಪಯೋಗವನ್ನು ಪಡೆದು ಉತ್ತಮ ಸಮಾಜ ಕಟ್ಟಬೇಕು ಎಂದು ತಿಳಿಸಿದರು.

ನಂತರ ಪೀಪಲ್ ಟು ಪೀಪಲ್ ಸಂಸ್ಥೆಯ ಪ್ರೋಗ್ರಾಮ್ ಮ್ಯಾನೇಜರ್ ಮಲ್ಲೈಕಾ ಅಮೀನ ಇವರು ಮಾತನಾಡಿ ಕಳೆದ ಒಂದು ವರ್ಷದಿಂದ ನಮ್ಮ ಸಂಸ್ಥೆಯಿಂದ ಇಂತಹ ಆರೋಗ್ಯ ಕೇಂದ್ರಗಳ ಮೂಲಕ ಮಹಿಳಾ ಕ್ಷೇಮಾ ತಪಾಸಣೆ ಶಿಬಿರ ಕೈಗೊಂಡು ಮಹಿಳೆಯರಿಗೆ ಎಲ್ಲಾ ಪರೀಕ್ಷೆಗಳು ಉಚಿತವಾಗಿ ನೀಡಿದ್ದೇವೆ. ಇದರಲ್ಲಿ ನುರಿತ ಮಹಿಳಾ ವೈದ್ಯರಿಂದ ಆರೋಗ್ಯ ತಪಾಸಣೆ, ಬಾಯಿ ಕ್ಯಾನ್ಸರ್ ತಪಾಸಣೆ, ಬಿಪಿ, ಸಕ್ಕರೆ ತಪಾಸಣೆ, ಕಣ್ಣು ತಪಾಸಣೆ, ಎಚ್‌ಬಿ ಪರೀಕ್ಷೆ, ಎಲ್‌ಎಫ್‌ಟಿ/ಆರ್‌ಎಫ್‌ಟಿ, ಎಚ್‌ಬಿಎ1ಸಿ ತಪಾಸಣೆ, ಮಾನಸಿಕ ಆರೋಗ್ಯ ಸಲಹೆಗಾರ-



ರಿಂದ ಮಾಹಿತಿ ಮತ್ತು ಸಲಹೆ , ಉಚಿತ ಅಭಾ ಕಾರ್ಡ್ ನೋಂದಣಿ ಮತ್ತು ಮಹಿಳೆಯ-ರಿಗೆ ಪೌಷ್ಟಿಕ ಆಹಾರದ ಕುರಿತು ಗ್ರಾಮಸ್ಥ-ರಿಗೆ ಸಲಹೆ ನೀಡಿ ಮಹೆಂದಿ ಬಿಡಿಸಿದರು.

ಈ ಸಂದರ್ಭದಲ್ಲಿ ಮಹಿಳಾ ವೈದ್ಯೆ ಅಪೇಕ್ಷ,ಸುವರ್ಣ , ಡಾ.ಸುನೀಲ್, ದಂತ ವೈದ್ಯೆ ನವನೀತ ಗಬ್ಬೂರ್, ಕಣ್ಣು ವೈದ್ಯರು ,ಮಂಜು ಸಿಹೆಚ್‌ಒ ಹನುಮೇಶ ಸಿಹೆಚ್‌ಒ ಜಯಶ್ರೀ ಸಿಎಚ್‌ಒ,ಶರಣೆಗೌಡ ಸಿಹೆಚ್‌ಒ ರಾಜೇಶ್ವರಿ ಹೆಚ್‌ಐಒ,ವೆಂಕಟೇಶ ಕುಲ್ಕರ್ಣಿ ,ಪಿಪಿಎಚ್‌ಎಫ್ ಸಿಬ್ಬಂದಿ ಆಶಾ ಕಾರ್ಯಕರ್ತರು ,ಸ್ವಯಂ ಸೇವಕರು ಮತ್ತು ನೂರಾರು ಜನರು ಶಿಬಿರದಲ್ಲಿ ಭಾಗವಹಿಸಿ ಶಿಬಿರವನ್ನು ಯಶಸ್ವಿಗೊಳಿಸಿದರು.

## 'ಬಸವಗೀತೆ' ಪುಸ್ತಕವನ್ನು ಲೋಕಾರ್ಪಣೆ ಗೊಳಿಸಿದ ಸಚಿವರಾದ ಶ್ರೀ ಎನ್ ಎಸ್ ಬೋಸರಾಜು

❑ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಶ್ರೀ ಬಸವ ಸೇವಾ ಪ್ರತಿಷ್ಠಾನ ಹಾಗೂ ಸುದ್ದಿಮೂಲ ದಿನಪತ್ರಿಕೆಯ ಸಂಯುಕ್ತಾಶ್ರಯದಲ್ಲಿ ಬೆಂಗಳೂರಿನ ಗಾಂಧಿ ಭವನದಲ್ಲಿ ಆಯೋಜನೆಗೊಂಡಿದ್ದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ, ಸುದ್ದಿಮೂಲ ಪತ್ರಿಕೆಯ ಸಂಪಾದಕರಾದ ಶ್ರೀ ಬಸವರಾಜ ಸ್ವಾಮಿ ಅವರ ಸಂಪಾದಕತ್ವದ 9 ಸಂಪುಟಗಳ 'ಬಸವಗೀತೆ' ಪುಸ್ತಕವನ್ನು ಲೋಕಾರ್ಪಣೆ ಗೊಳಿಸಿದ ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಪರಿಷತ್ತಿನ ಸಭಾ ನಾಯಕರು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎನ್ ಎಸ್ ಬೋಸರಾಜು ಅವರು.



ಕಾರ್ಯಕ್ರಮದಲ್ಲಿ, ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಶ್ರೀ ಪ್ರೊ.ಮಲ್ಲೆಪುರಂ ಜಿ. ವೆಂಕಟೇಶ್, ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರು, ಆದ-್ಯಾತ್ಮಿಕ ಚಿಂತಕರಾದ ಶ್ರೀ ಲಕ್ಷ್ಮೀಶ ತೋಳ್ಪಾಡಿ, ಸುದ್ದಿಮೂಲ ಸಹ ಸಂಪಾದಕರಾದ ಶ್ರೀ ವಿಶ್ವನಾಥ, ಶ್ರೀ ದೊಡ್ಡಬಸ್ಸಪ್ಪ ಗೌಡ ಸೇರಿದಂತೆ ಅನೇಕ ಸಾಹಿತಿಗಳು, ಲೇಖಕರು ಉಪಸ್ಥಿತರಿದ್ದರು.

# ಲೊಯೋಲ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಜಾನಪದ ಜಾತ್ರೆ



❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ಲೊಯೋಲ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ನಡೆದ 'ಜಾನಪದ ಜಾತ್ರೆ ಕಾರ್ಯಕ್ರಮಕ್ಕೆ ಕಾಲೇಜಿನ ಪ್ರಾಚಾರ್ಯರಾದ ಫಾ.ವಿನೋದ್ ಪೌಲ್ ಚಾಲನೆ ನೀಡಿ ಮಾತನಾಡಿ ಜನಪದರ ಮೌಖಿ-ಕ ಸಾಹಿತ್ಯ ಇಂದಿಗೂ ಕೂಡ ಗ್ರಾಮೀಣರಲ್ಲಿ ಜೀವಂತವಾಗಿ ಉಳಿದಿರುವುದಕ್ಕೆ ಅವರ ಜೀವನ, ಪ್ರೀತಿ, ನಡೆ, ನುಡಿ, ತ್ಯಾಗ, ಬಲಿದಾನ ಆದ-'ರ್ಶ ಪ್ರಾಯವಾಗಿದೆ.ಹಾಗೂ ಇಂದಿನ ಅಧುನಿಕ ಕಾಲದಲ್ಲಿಯು ಕೂಡ ದಿನನಿತ್ಯದ ಚಟುವಟಿ-ಕೆಗಳು, ಕೌಟುಂಬಿಕ ಸಂಬಂಧಗಳು, ದೇವರುಗಳ ಉಪಾಸನೆ ಜಗತ್ತಿಗೆ ಮಾದರಿಯಾಗಿವೆ.

ಜನಪದರು ಅಕ್ಷರ ಲೋಕದ ಬಗ್ಗೆ ಅರಿವಿರದ ನಕ್ಷತ್ರಗಳಾಗಿ ಬೆಳಗುತ್ತಿದ್ದಾರೆ ಎಂದು ತಿಳಿಸಿದರು. ಕಾಲೇಜು ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಕಾಲೇಜಿನ ಉಪನ್ಯಾಸಕರಾದ ಭಾಗ್ಯ ಮಾತನಾಡಿ ನಮ್ಮ ಜನಪದರ ಆಚರಣೆಗಳು ಮತ್ತು ಅವರ ಸಂಸ್ಕೃತಿಗಳನ್ನು ಕಾಲೇಜು ವಿದ್ಯಾರ್ಥಿಗಳಿಗೆ ಪರಿಚಯಿಸುವ ಉದ್ದೇಶದಿಂದ 'ಜಾನಪದ ಜಾತ್ರೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜನಪದ ಕಲೆಗಳು ನಶಿಸಬಾರದು ಮತ್ತು ಮುಂದಿನ ಪೀಳಿಗೆಗೆ ಕೊಂಡೊಯ್ಯಲು ವಿದ್ಯಾರ್ಥಿಗಳು ಮುಂದಾಗಬೇಕು ಎಂದು ತಿಳಿಸಿದರು.


ಲೊಯೋಲ ಕಾಲೇಜಿನ ಎಲ್ಲಾ ವಿಭಾಗಗಳ ವಿದ್ಯಾರ್ಥಿ,ವಿದ್ಯಾರ್ಥಿನಿಯರು ಜನಪದ ಗೀತೆಗಳನ್ನು ಹಾಡಿ, ಗ್ರಾಮೀಣ ಭಾಗದ ಉಡುಗೆ ತೊಡುಗೆಗಳನ್ನು ಧರಿಸಿ ಜಾನಪದ ಹಾಡುಗಳಿಗೆ ಉತ್ಸಾಹದಿಂದ ನೃತ್ಯ ಪ್ರದರ್ಶನ ನೀಡಿ ಗಮನ ಸೇಳೆದರು ಕಾಲೇಜಿನ ಒಳಾಂಗಣದಲ್ಲಿ ಗ್ರಾಮೀಣ ಸೊಗಡನ್ನು ಪ್ರತಿಬಿಂಬಿಸುವ ಮಾದರಿಗಳನ್ನು ಪ್ರದರ್ಶಸಲಾಯಿತು.

ಹಾಗೂ ಪ್ರತಿ-ಕೃತಿಗಳನ್ನು ಸೃಷ್ಟಿಸಲಾಗಿತ್ತು. ಕಾರ್ಯಕ್ರಮದಲ್ಲಿ ಪದವಿಯ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ತೋ-ರಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು ಹಾಗೂ ಕಾಲೇಜಿನ ಅಧಿಕೃತ ಮಾಧ್ಯಮ ತಂಡದವರ ಟೀ ಶರ್ಟಗಳನ್ನು ಅನಾವರಣಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ಲೊಯೋಲ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು, ಉಪನ್ಯಾಸಕರು, ಸಿಬ್ಬಂದಿಗಳು .ಗುರುಗಳು ಮತ್ತು ಕನ್ಯಾಸ್ತ್ರೀಯರು ಭಾಗವಹಿಸಿದ್ದರು.

# ಇಂದು ನೆನಪಿಗೆ ವ್ಯಾಯಾಮ ಮತ್ತು ಸೋತು ಗೆದ್ದ ಸಾಧಕರಿವರು ವಿದ್ಯಾರ್ಥಿಗಳಿಗೆ ಪ್ರೇರಣಾ ಕಾರ್ಯಗಾರ: ರಾಜಶೇಖರಸ್ವಾಮಿ

❑ ನೈಜ್ಯ ದೆಸೆ ನ್ಯೂಸ್

ಮಾನ್ವಿ: ಪಟ್ಟಣದ ನೇತಾಜಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಡಿ.5 ರಂದು ಬೆ.10ಕ್ಕೆ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ , ಹಾಗೂ ಮಾಧ್ಯಮ ಸಮಿತಿ, ಸೃಜನಾ ಫೌಂಡೇಶನ್-ಭಾರತೀಯ ವೈದ್ಯಕೀಯ ಸಂಘ ಸಿರುಗುಪ್ಪ, ಸಂಯುಕ್ತಾಶ್ರಯದಲ್ಲಿ ನೆನಪಿಗೆ ವ್ಯಾಯಾಮ ಮತ್ತು ಸೋತು ಗೆದ್ದ ಸಾಧಕ-ರಿವರು ವಿದ್ಯಾರ್ಥಿಗಳಿಗೆ ಪ್ರೇರಣಾ ತರಗತಿಯ ಕಾರ್ಯಕ್ರಮದ ದಿವ್ಯಾಸಾನಿಧ್ಯವನ್ನು ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ




ಮಹಾಸ್ವಾಮಿಗಳು ವಹಿಸಲಿದ್ದು ಡಾ. ಮಧುಸೂಧನ್ ಕಾರಿಗನೂರು ಶಸ್ತ್ರವೈದ್ಯರು.

ಸಿರುಗುಪ್ಪ, ನರಸಿಂಹ ಮೂರ್ತಿ ಹಾಸ್ಯ ಕಲಾವಿದರು, ಎಸ್.ಎಂ.ಹಿರೇಮಠ ವಿಜ್ಞಾನ ಶಿಕ್ಷಕರು ಬಳ್ಳಾರಿ, ಪಕ್ಷಿಗಳ ಕುರಿತು ಸಲ್ಲಾವುದಿನ್ ಪಕ್ಷಿ ಪ್ರೇಮಿ ರವರು ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ನೀಡಲಿದ್ದಾರೆ.ಕಾರ್ಯಕ್ರಮವನ್ನು ಕೆ.ಪಿ.ಎಸ್.ವಿ.ಎಸ್.ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಮತ್ತು ಆಸ್ಪತ್ರೆಯ ಪ್ರಾಚಾರ್ಯರಾದ ಡಾ.ಜೀವನೇಶ್ವರಯ್ಯ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ನೇತಾಜಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಕೆ ವಿಜಯಲಕ್ಷ್ಮಿ ವಹಿಸಲಿದ್ದಾರೆ.

ಪ್ರಾಸ್ತವಿಕ ನುಡಿ ತಾಯಪ್ಪ ಬಿ.ಹೊಸುರುರವರಿಂದ ಮುಖ್ಯ ಅತಿಥಿಗಳಾಗಿ ತಾಲೂಕು ಕ.ಸಾ.ಪ.ಅಧ್ಯಕ್ಷರಾದ ಶರಣಬಸವ ನೀರಮಾನ್ವಿ, ಕೆ.ರಾಜ ರವಿವರ್ಮ, ಅ.ಖಿ.ಭಾ.ವೀ.ಲಿಂ.ಮಹಾಸಭಾ ಮಾನ್ವಿ ತಾ.ಅಧ್ಯಕ್ಷರಾದ ಅರುಣ್ ಚಂದಾ ಹಾಗೂ ಮಾಧ್ಯಮ ಸಮಿತಿಯ ಪದಾಧಿಕಾ-ರಿಗಳು ಭಾಗವಹಿಸಲಿದ್ದಾರೆ ಎಂದು ಅ.ಖಿ.ಭಾ.ವೀ.ಲಿಂ.ಮಹಾಸಭಾ ಮಾಧ್ಯಮ ಸಮಿತಿಯ ತಾ.ಅಧ್ಯಕ್ಷರಾದ ರಾಜಶೇಖರಸ್ವಾಮಿ ಪ್ರಕಟಣೆಯಲ್ಲಿ ಕೋರಿದ್ದಾರೆ.

## ಪೋಲಿಯೋ ಲಸಿಕೆ ಡಿಸೆಂಬರ್ 21 ಭಾನುವಾರ ಪೋಲಿಯೊ ಎರಡು ಹನಿ ಹಾಕಿಸಿ ಅಂಗವಿಕಲ ತಡೆಗಟ್ಟಿ ಸರೋಜ.ಕೆ

❑ ನೈಜ್ಯ ದೆಸೆ ನ್ಯೂಸ್

ಇಂದು ರಾಯಚೂರು ತಾಲೂಕು ರಾಯಚೂರು ನಗರದ ಅರಬ್ ಮೋಹಲ್ಲಾದ ಅಂಗನವಾಡಿ ಕೇಂದ್ರದಲ್ಲಿ ಲಸಿಕಾ ಸತ್ರಕ್ಕೆ ಆಗಮಿಸಿದ ಫಲಾನುಭವಿಗಳಿಗೆ ಶ್ರೀಮತಿ ಸರೋಜ.ಕೆ ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿಗಳು ಪೋಲಿಯೊ ರೋಗ ಅಂಗವಿಕಲತೆಯನ್ನು ತರುವಂತಹದ್ದು ಪೋಲಿಯೋ ರೋಗ ವಿರುದ್ದ ಹೋರಾಡುವ ಶಕ್ತಿ ಎರಡು ಹನಿ ಪೋಲಿಯೋ ಲಸಿಕೆಯಿಂದ ಮಾತ್ರ ಸಾಧ್ಯ.



ಪ್ರತಿಯೊಬ್ಬ ತಾಯಂದಿರು ಡಿಸೆಂಬರ್ 21 ರಂದು ಭಾನುವಾರ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮದಲ್ಲಿ ಹತ್ತಿರದ ಬೂತ್ಗಳಿಗೆ ತೆರಳಿ 0-5 ವರ್ಷದ ಒಳಗಿನ ಮಕ್ಕಳಿಗೆ ತಪ್ಪದೆ ಎರಡು ಹನಿ ಪೋಲಿಯೊ ಲಸಿಕೆ ಹಾಕಿಸಿ ಪೋಲಿಯೋ ಮುಕ್ತರನ್ನಾಗಿಸಿ ಮಕ್ಕಳು ದೇಶದ ಬೆನ್ನೆಲುಬು ಪೋಲಿಯೊ ಮುಕ್ತ ಭಾರತಕ್ಕೆ ಕರೆ ನೀಡಿದರು. ಈ ಕಾರ್ಯಕ್ರಮದಲ್ಲಿ ಸುನೀತ ಪ್ರಾಥ-'ಮಿಕ ಆರೋಗ್ಯ ಸುರಕ್ಷಧಿಕಾರಿಗಳು, ಹಂಪಮ್ಮ , ವಿಜಯಲಕ್ಷ್ಮಿ ಆಶಾ ಕಾರ್ಯಕರ್ತೆಯರು, ಶಾಹೀಸುಲ್ತಾನ, ಶಮ್ ಶಾದ್ ಅಂಗನವಾಡಿ ಕಾರ್ಯ ಕರ್ತೆಯರು ತಾಯಂದಿರು ಹಾಜರಿದ್ದರು.

# ಮಾಡಸಿರವಾರ ಅಲಬನೂರು, ಗ್ರಾ.ಪಂ.ಗೆ ಸಹಾಯಕ ನಿರ್ದೇಶಕ ಯಂಕಪ್ಪ ಭೇಟಿ ಕಾಮಗಾರಿ ಪರಿಶೀಲನೆ

❑ ನೈಜ್ಯ ದೆಸೆ ನ್ಯೂಸ್

ನರೇಗಾ ಯೋಜನೆಯಡಿಯಲ್ಲಿ ಅನುಷ್ಠಾನಗೊಂಡ ಉದ್ಬಾಳ ಗ್ರಾಮದಲ್ಲಿ ಹೈಟೆಕ್ ಶೌಚಾಲಯ ಸಿ.ಡಿ. ನಿರ್ಮಾಣ ಕಾಮಗಾರಿಗಳನ್ನು ಪರಿಶೀಲಿಸಿ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ನರೇಗಾ ಕಾಮಗಾರಿಗಳ ಕಡತಗಳನ್ನು ಹಾಗೂ ಏಳು ವಾಹಿನಿ ಪುಸ್ತಕಗಳನ್ನು ಸಹಾಯಕ ನಿರ್ದೇಶಕ ಯಂಕಪ್ಪ, ಪರಿಶೀಲಿಸಿದರು.

ಕರ ವಸೂಲಾತಿ ಕುರಿತು ಸಿಬ್ಬಂದಿ ಜೊತೆಗೆ ವಿಚಾರಣೆ ಮಾಡಿ, ನೀಡಿದ ಗು-ರಿಯನ್ನು ಪೂರ್ಣಗೊಳಿಸಲು ತಿಳಿಸಿ, ನರೇಗಾ ಕೂಲಿ ಕಾರ್ಮಿಕರ ಇಕೆವೈಸಿಯನ್ನು



ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲು ಸೂಚಿಸಿ, ಮಾನವ ದಿನಗಳು ಸೃಜನೆ ಕಡಿಮೆ ಆಗಿರುವುದರಿಂದ ಹೆಚ್ಚಿನ ಕೂಲಿ ಕಾರ್ಮಿಕ-ರಿಗೆ ಕೆಲಸವನ್ನು ನೀಡಿ, ಗುರಿಯನ್ನು ಕಡ್ಡಾಯವಾಗಿ ತಲುಪಲು ತಿಳಿಸಿದರು.


ತದ ನಂತರ ಕನ್ನಾರಿ ಗ್ರಾಮದಲ್ಲಿ ಕೂಲಿ ಕಾರ್ಮಿಕರ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ, ಕೂಲಿ ಕಾರ್ಮಿಕರ ಜೊತೆಗೆ ಕೂಲಿ ಮೊತ್ತದ ವಿವರಣೆ ಕೇಳಿ ನರೇಗಾ ಕೂಲಿ ಕಾರ್ಮಿಕರೊಂದಿಗೆ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಸರಿಸಮನಾದ ಕೂಲಿ 370 ಮೊತ್ತವನ್ನು ಪಡೆಯಲು ಸಲಹೆ ಸೂಚಿಸಿದರು. ಈ ಸಂದರ್ಭದಲ್ಲಿ: ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮುದಕಪ್ಪ, ಸರಸ್ವತಿ, ತಾಂತ್ರಿಕ ಸಂಯೋಜಕ ಮೆಹಬೂಬ್, ಬಿ.ಎಫ್.ಟಿ ಆಂಜನೇಯ ಬೆಳಗುರ್ಕಿ, ಜಿ.ಕೆ.ಎಮ್. ಹಾಗೂ ಪಂಚಾಯತ್ ಸಿಬ್ಬಂದಿಗಳಿದ್ದರು.

# ಶ್ರೀ ಚೌಡೇಶ್ವರಿ ದೇವಿಯ ಗೀತೆಯ ಧ್ವನಿ ಸುರುಳಿ ಬಿಡುಗಡೆ ಮತ್ತು ವಿವಿಧ ಸಾಹಿತಿಗಳ ಕೃತಿಗಳ ಪ್ರದರ್ಶನ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಕರುನಾಡ ಕವಿ ಕಾವ್ಯ ಪ್ರತಿಭಾ ಸಿಂಚನ ವೇದಿಕೆ ಸಿಂಧನೂರು, ಮತ್ತು ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕ ಸಿಂಧನೂರು, ಶ್ರೀ ಸುಕ್ಷೇತ್ರ ಗದ್ರಟಗಿ ಚೌಡೇಶ್ವರಿ ದೇವಿ ಸಕಲ ಭಕ್ತರ ಬಳಗ ವತಿಯಿಂದ ಅರ್ಪಿಸುವ ಭಕ್ತಿ ಗೀತೆಯ ಧ್ವನಿ ಸುರುಳಿ ಬಿಡುಗಡೆ ಮತ್ತು ವಿವಿಧ ಸಾಹಿತಿಗಳಕೃತಿಗಳಪ್ರದರ್ಶನ ಕಾಯ9ಕ್ರಮ ನೆರವೇರಿತು.

ಇಂದು ಸಿಂಧನೂರು ತಾಲೂಕಿನ ಗದ್ರಟಗಿ ಗ್ರಾಮದ ಶ್ರೀ ಚೌಡೇಶ್ವರಿ ದೇವಾಲಯದ ಆಲಯದಲ್ಲಿ ಶ್ರೀ ಹೆಚ್.ಎಂ.ಶ್ರೀ ಶೈಲ ಉಪನ್ಯಾಸಕರು ಮತ್ತು ಲೇಖಕರು ಸಿಂಧನೂರು ಇವರು ರಚಿಸಿದ ಶ್ರೀ ಚೌಡೇಶ್ವರಿ ದೇವಿಯ ಗೀತೆಯ ಧ್ವನಿ ಸುರುಳಿ ಬಿಡುಗಡೆ ಮತ್ತು ವಿವಿಧ ಸಾಹಿತಿಗಳ ಕೃತಿಗಳ ಪ್ರದರ್ಶನ ಕಾಯ9ಕ್ರಮ ಏಪ9ಡಿಸಲಾಗಿತ್ತು. ಈ ಕಾಯ9ಕ್ರಮದ ಅಧ್ಯಕ್ಷತೆಯನ್ನು ಕರುನಾಡ



ಕವಿ ಕಾವ್ಯ ವೇದಿಕೆ ಸದಸ್ಯರಾದ ಶ್ರೀ ಪಿ.ವೆಂಕಟೇಶ್ ಬಾಗಲವಾಡ ವಹಿಸಿದ್ದರು. ಇವರು ಕಾಯ9ಕ್ರಮದಲ್ಲಿ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವುದು ತಂದೆ ತಾಯಿ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ಧ್ವನಿ ಸುರುಳಿಗೆ ರಾಗ ಸಂಯೋಜನೆ ನೀಡಿ ಗೀತೆಯನ್ನು ಹಾಡಿದ ದೂರದರ್ಶನ ಮತ್ತು ಆಕಾಶವಾಣಿ ಕಲಾವಿದರು, ಶ್ರೀ ವಿರೇಶ ಸಾಲಿಮಠ ಮುಖ್ಯ ಗುರುಗಳು ಸರಕಾರಿ ಪ್ರೌಢಶಾಲೆ ಮಾಡ ಸಿರವಾರ ಇವರು ಸಂಗೀತದಿಂದ ಮನಶ್ಯಾಂತಿ ಪಡೆಯಲು ಸಾಧ್ಯ ಎಂದು ತಿಳಿಸಿದರು.

ಗೀತೆಯ ಸಂಗೀತ ಸಂಂ-ಯೋಜನೆ ಬಿ.ಆರ್.ಶಾಮೀದ್ ಕಂದಗಲ್ ಧ್ವನಿ ಮುದ್ರಣ ಸಾಜೀದ್ ರಿಕಾರ್ಡಿಂಗ್ ಸ್ಟೂಡಿಯೋ ಸಿಂಧನೂರು.ಸಿಂಧನೂರು ಪೊಲೀಸ್ ಇಲಾಖೆ ಅಧಿಕಾರಿಗಳಾದ ಶ್ರೀ ಎಸ್.ಎಂ.ವಿರೇಶ ಉಪಸ್ಥಿತ-ರಿದ್ದರು ಕಾರ್ಯಕ್ರಮದ ಅನಿಸಿಕೆಗಳ ಅಂಚಿಕೊಂಡು ಪ್ರತಿಯೊಬ್ಬ ಜೀವನಶೈಲಿಯೂ ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ಜೊತೆಗಿನ ನಂಟು ನೆಮ್ಮದಿಯ ಜೀವನ ನಡೆಸಲು ಸಾದ್ಯವಾಗುತ್ತದೆ ಎಂದು ತಿಳಿಸಿದರು. ಜೊತೆಗೆ ಮೊದಲಿಗೆ ಗೀತೆಗಳಾದ ಸಿಂಧನೂರು ನಾಡ ಚಂದ,ಸಿಂಧೂರ ಚೆಲುವೆ, ಮಗುವೆ ನೀನು ನಕ್ಕರೆ, ಹಾಲು ಜೇನು ಸಕ್ಕರೆ. ಹುಟ್ಟು ಹಬ್ಬದ ಗೀತೆ, ಚಿಕ್ಕ ಮಕ್ಕಳ ಹಾಡುಗಳು ಬರೆದಿದ್ದಾರೆ. ಅದೇ ರೀತಿಯಾಗಿ ಶ್ರೀ ಸುಕ್ಷೇತ್ರ ಗದ್ರಟಗಿ ಚೌಡೇಶ್ವರಿ ಭಕ್ತಿಗೀತೆ ರಚನೆಕಾರ ಶ್ರೀ ಹೆಚ್. ಎಂ.ಶ್ರೀಶೈಲ ಇವರು ಪ್ರಾಸ್ತಾವಿಕವಾಗಿ ಗೀತೆ ರಚನೆಗೆ ತಾಯಿ ಶ್ರೀ ಚೌಡೇಶ್ವರಿ ದೇವಿ ಪ್ರೇರಣೆಯಾಗಿದ್ದಾಳೆ.

ಬರವಣಿಗೆಗೆ ಒಂದು ಶಕ್ತಿಯುತ ಆಯುಧವಾಗಿದೆ ಅದನ್ನು ಬಳಸಲು ಮೊದಲು ಪೂಜಿಸು ಮನದಲಿ ಆರಾಧಿಸಬೇಕು ಅಂದಾಗ ಜ್ಞಾನ ಬೆಳಕಿನಂತೆ ಬೆಳಗುವುದು ಎಂದು ತಿಳಿಸಿದರು. ಪ್ರಾಥ9ನೆಯನ್ನು ಪ್ರಾಥಮಿಕ ಶಾಲೆಯ ರವಿಕುಮಾರ್ ಶಿಕ್ಷಕರು ನೆರವೇರಿಸಿದರು. ಶಾಲಾ ಮಕ್ಕಳು ಮತ್ತು ಗದ್ರಟಗಿ ಸಕಲ ಭಕ್ತರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ವಿವಿಧ ಲೇಖಕರ ಕೃತಿಗಳನ್ನು ಪ್ರದಶ9ನಕ್ಕೆ ಇಡಲಾಗಿತ್ತು. ಕೆಲವು ಆಸಕ್ತರು ಕೃತಿಗಳನ್ನು ಕೊಂಡೊಯ್ದರು. ವೇದಿಕೆಯಲ್ಲಿ ಊರಿನ ಗಣ್ಯರಾದ ಶ್ರೀ ಕರಿಬಸಯ್ಯ ಸ್ವಾಮಿ, ಶ್ರೀ ಚನ್ನನಗೌಡ ಪಾಟೀಲ್, ಶ್ರೀ ಅಮರಯ್ಯ ಸ್ವಾಮಿ ಆಲಯದ ಅರ್ಚಕರು, ಬಸವರಾಜ್ ದೇವರಡ್ಡಿ ಮತ್ತು ಉಪನ್ಯಾಸಕರು ಹಾಗೂ ಕವಿ ಬಳಗ ಸೇರಿದ್ದರು. ದೇವಸ್ಥಾನದ ವತಿಯಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಆಳದಪ್ಪ ಇಂಪಾದ ಗಾಯನದೊಂದಿಗೆ ವಂದನಾಪ9ಣೆಯನ್ನು ನೆರವೆರಿಸಿದರು.

# ನೇಮಕಾತಿ ಪ್ರಕಟಣೆ

KVAFSU ನೇಮಕಾತಿ 2025 25 ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ KVAFSU ನೇಮಕಾತಿ 2025: 25 ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪಶುವೈದ್ಯಕೀಯ, ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯವು ನವೆಂಬರ್ 2025 ರÀ KVAFSU ಅಧಿಕೃತ ಅಧಿಸೂಚನೆಯ ಮೂಲಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೀದರ್ – ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 13–ಡಿಸೆಂಬರ್–2025 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹುದ್ದೆಯ ಹೆಸರು ಹುದ್ದೆಗಳ ಸಂಖ್ಯೆ: ಪ್ರಾಧ್ಯಾಪಕರು 5 , ಸಹ ಪ್ರಾಧ್ಯಾಪಕರು–5, ಸಹಾಯಕ ಪ್ರಾಧ್ಯಾಪಕರು 15 https://kvafsu.edu.in/ ಅಧಿಕೃತ ವೆಬ್‌ಸೈಟ್: kvafsu.edu.in 13–ಡಿಸೆಂಬರ್–2025

# ಕಾಡಿನಿಂದ ನಾಡಿಗೆ ಬಂದ ಜಿಂಕೆಯನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿ ವನಸಿರಿ ಫೌಂಡೇಶನ್ ಸಂಚಾಲಕ ರಂಜಾನ್ ಸಾಬ್

ನೈಜ್ಯ ದೆಸೆ ನ್ಯೂಸ್

**ಸಿಂಧನೂರು ನಗರದ ಕಥಾಳ ಕ್ಯಾಂಪ್ ನ ಹ್ಯಾಪಿ ಕಿಡ್ಸ್ ಇಂಟರ್ನ್ಯಾಷನಲ್ ಶಾಲೆಯ ಹತ್ತಿರ ಜಿಂಕೆ ಮರಿಯೊಂದು ಹಿರೇ ಹಳ್ಳದ ಮೂಲಕ ಬಂದಾಗ ಅದನ್ನು ನೋಡಿದ ವನಸಿರಿ ಫೌಂಡೇಷನ್ ಸಂಚಾಲಕರಾದ ರಂಜಾನ್ ಸಾಬ್ ಅವರು ಅದನ್ನು ಹಿಡಿದು ರಕ್ಷಣೆ ಮಾಡಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಒಪ್ಪಿಸಲಾಯಿತು.**



ಅರಣ್ಯ ಇಲಾಖೆಯ ಅಧಿಕಾ–ರಿಗಳು ಜಿಂಕೆಯನ್ನು ಪಡೆದು ಮಾನವಿ ಅರಣ್ಯ ಇಲಾಖೆ ಕಚೇರಿಗೆ ಕಳುಹಿಸಲಾಯಿತು. ಇದೇವೇಳೆ ಹ್ಯಾಪಿ ಕಿಡ್ಸ್ ಇಂಟರ್ನ್ಯಾಷನಲ್ ಶಾಲೆಯ ವಿದ್ಯಾರ್ಥಿಗಳು ಜಿಂಕೆಯನ್ನು ಕಂಡು ಕೈ,ಕಾಲು,ಮೈ,ತಲೆಯ ಮೇಲೆ ಕೈಯಿಂದ ಸವರಿ ಸಂತೋಷಪಟ್ಟರು. ಸಸ್ಯ ಸಂಪತ್ತಿನ ಜೊತೆಗೆ ಪರಿಸರದಲ್ಲಿ ವಾಸವಾಗಿರುವ ಪ್ರಾಣಿ ಪಕ್ಷಿಗಳನ್ನು ಕಾಪಾಡುವ ಜವಾಬ್ದಾರಿ ಪ್ರತಿಯೊಬ್ಬ ನಾಗರೀಕರ ಕರ್ತವ್ಯವಾಗಿದೆ.ಇತ್ತೀಚಿನ ಆಧುನಿಕತೆಯ ಭರಾಟೆಯಲ್ಲಿ ಕಾಡುಗಳು ನಾಶವಾಗುತ್ತಿವೆ. ಕಾಡುಗಳ ನಾಶದಿಂದಾಗಿ ಕಾಡುಪ್ರಾಣಿಗಳು ಆಹಾರವನ್ನು ಹುಡುಕಿಕೊಂಡು ನಾಡಿಗೆ ಬರುತ್ತಿವೆ.

ಕಾಡುಗಳು ಇದ್ದರೆ ಮನುಷ್ಯ ಮತ್ತು ಇತರೆ ಪ್ರಾಣಿ ಪಕ್ಷಿಗಳು ಜೀವಿಸಲು ಸಾಧ್ಯ ಕಾಡುಗಳಿಲ್ಲದಿದ್ದರೆ ಜೀವಿಸಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಬ್ಬರೂ ಗಿಡಮರಗಳನ್ನು ಉಳಿಸಿ ಬೆಳೆಸುವ ಜೊತೆಗೆ ಪ್ರಾಣಿ ಪಕ್ಷಿಗಳನ್ನು ರಕ್ಷಣೆ ಮಾಡಲು ಮುಂದಾಗಬೇಕು.ವನಸಿರಿ ತಂಡ ಇಂತಹ ಒಂದು ಕಾರ್ಯದಲ್ಲಿ ಪ್ರತಿ ದಿನ ಪ್ರತಿ ಕ್ಷಣ ಕಾರ್ಯನಿರತವಾಗಿರುತ್ತದೆ. ಇಂದು ವನಸಿರಿ ಫೌಂಡೇಷನ್ ಸಂಚಾಲಕರಾದ ರಂಜಾನ್ ಸಾಬ್ ಅವರು ಆಹಾರವನ್ನು ಹೂಡಿಕೊಂಡು ಬಂದ ಜಿಂಕೆ ಮರಿಯನ್ನು ಕಂಡು ರಕ್ಷಣೆ ಮಾಡಿ ನಮಗೆ ಕರೆ ಮಾಡಿ ತಿಳಿಸಿದಾಗ ಅರಣ್ಯ ಇಲಾಖೆಯ ಅಧಿಕಾ–ರಿಗಳಿಗೆ ಮಾಹಿತಿ ನೀಡಿದ ತಕ್ಷಣ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದರು.

ನಂತರ ಅದನ್ನು ಅಧಿಕಾರಿಗಳಿಗೆ ಒಪ್ಪಿಸಿದರು. ರಂಜಾನ್ ಸಾಬ್ ಅವರಿಗೆ ವನಸಿರಿ ಫೌಂಡೇಷನ್ ವತಿಯಿಂದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.ಸಾರ್ವಜನಿಕರೂ ಕೂಡಾ ಇಂತಹ ಕಾಡು ಪ್ರಾಣಿಗಳು ನಾಡಿಗೆ ಬಂದಿರುವುದು ಕಂಡು ಬಂದರೆ ತಕ್ಷಣ ವನಸಿರಿ ಫೌಂಡೇಷನ್ ಸದಸ್ಯರಿಗೆ ತಿಳಿಸಬೇಕು.ಮತ್ತು ಸಸ್ಯಗಳು, ಕಾಡುಪ್ರಾಣಿಗಳ ರಕ್ಷಣೆಯ ಕಾರ್ಯದಲ್ಲಿ ವನಸಿರಿ ತಂಡ ಅರಣ್ಯ ಇಲಾಖೆಯ ಜೊತೆಗೆ ಸದಾಕಾಲ ಕೈಜೋಡಿಸುತ್ತೇವೆ ಅರಣ್ಯ ಇಲಾಖೆ ಕೂಡಾ ವನಸಿರಿ ತಂಡಕ್ಕೆ ಸಹಕರಿಸಬೇಕು ಎಂದರು. ಈ ಸಂಧರ್ಭದಲ್ಲಿ ಅರಣ್ಯ ಇಲಾಖೆಯ ಅಧಿಕಾರಿ ಆಖಈಔ ಶ್ರೀಮತಿ ಅರುಣ್, ಗಿಡ ಕಾವಲುಗಾರ ಸುಭಾಸ್,ಶಾಲೆಯ ಮುಖ್ಯಸ್ಥ ಮುರಳಿಕೃಷ್ಣ,ಮುಖ್ಯ ಗುರು ಶ್ರೀಮತಿ ಉನ್ನತಿ,ಶಿಕ್ಷಕರಾದ ರಾಧಾ ಮತ್ತು ವಿದ್ಯಾರ್ಥಿಗಳು ಇದ್ದರು.

# ಕೋಟ್ಪಾ ಕಾಯ್ದೆ ಉಲ್ಲಂಘಿಸಿ ತಂಬಾಕು ಉತ್ಪನ್ನ ಮಾರಾಟ ಮಾಡಿದ ಅಂಗಡಿಗಳಿಗೆ ದಂಡ

ನೈಜ್ಯ ದೆಸೆ ನ್ಯೂಸ್

**ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಹಾಗೂ ತಹಸಿಲ್ದಾರರ ಮಾರ್ಗದರ್ಶನದಡಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಲಹೆಗಾರರಾದ ಪ್ರಿಯಾಂಕರವರ ನೇತೃತ್ವದಲ್ಲಿ ಸಿಂಧನೂರು ನಗರದ ವಿವಿಧ ಕಿರಾಣಿ ಅಂಗಡಿಗಳಿಗೆ ಬೇಟಿ ನೀಡಿ ತಂಬಾಕು ಉತ್ಪನ್ನಗಳ ದಾಸ್ತಾನು, ಮಾರಾಟ, ಪರವಾನಿಗೆ ಪತ್ರಗಳನ್ನು ಪರಿಶೀಲಿಸಿ ಕೋಟ್ಪಾ ಕಾಯ್ದೆ ಉಲ್ಲಂಘಿ–ಸಿದ ಒಟ್ಟು 12 ಅಂಗಡಿಗಳಿಗೆ ವಿವಿಧ ಸೆಕ್ಷನ್ ಅಡಿ 34 ಕೇಸ್ ದಾಖಲಿಸಿ ರೂಪಾಯಿ 8400 ಗಳನ್ನು ದಂಡವಾಗಿ ವಿಧಿಸಿದರು.**




ವರ್ತಕರು ಅನುಮತಿ ಪಡೆಯದೆ ಕಾನೂನು ಬಾಹಿರವಾಗಿ ಕಿರಾಣಿ ಅಂಗಡಿಗಳಲ್ಲಿ ತಂಬಾಕು ಹಾಗೂ ಅದರ ಉತ್ಪನ್ನಗಳನ್ನು ಮಾರಾಟ ಮಾಡಬಾರದು ಎಂದು ಸೂಚಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ, ಸುರೇಶ್ ಬಾಬು ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಪೊಲೀಸ್ ಕಾನಸ್ಟೇಬಲ್ ಮಲ್ಲಿಕಾರ್ಜುನ ಹಾಗೂ ಇತರರು ಉಪಸ್ಥಿತರಿದ್ದರು.

# ಮಸ್ಕಿಯಲ್ಲಿ ಮಾದಾರ ಚೆನ್ನಯ್ಯನವರ 956 ನೇ ಜಯಂತಿ ಆಚರಣೆ



ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಪಟ್ಟಣದ ಅಂಬೇಡ್ಕರ್ ನಗರದಲ್ಲಿ ಮಾದಾರ ಚೆನ್ನಯ್ಯನವರ 956ನೇ ಜಯಂತಿ ಆಚರಣೆ ಗುರುವಾರ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ದೊಡ್ಡಪ್ಪ ಮುರಾರಿ ಮಾತನಾಡಿ ಮಾದಾರ ಚೆನ್ನಯ್ಯ ಅವರು 12ನೇ ಶತಮಾನದ ಪ್ರಮುಖ ಶರಣರಾಗಿದ್ದರು. ಬಸವಣ್ಣನವರ ಮೆಚ್ಚಿನ ಶರಣರಲ್ಲಿ ಚೆನ್ನಯ್ಯ ಕೂಡ ಒಬ್ಬರು' ಎಂದು ಹೇಳಿದರು.**

ನಂತರ ಮಲ್ಲಯ್ಯ ಬಳ್ಳಾ ಮಾತನಾಡಿ ಚೆನ್ನಯ್ಯನವರು ಅನನ್ಯ ವಚನಕಾರರು. ಬಸವಣ್ಣನವರು ಮಾದಾರನೆಂಬೆನೆ ಚೆನ್ನಯ್ಯನ, ಡೋಹಾರನೆಂಬೆನೆ ಕಕ್ಕಯ್ಯನ ಎಂದು ಚೆನ್ನಯ್ಯನವರಿಗೆ ಮೊದಲ ಪ್ರಾಶಸ್ತ್ಯ ನೀಡುತ್ತಿದ್ದರು' ಎಂದು ವಿವರಿಸಿದರು.

ನಂತರ ಪುರಸಭೆಯ ಸದಸ್ಯ ಮೌನೇಶ ಮುರಾರಿ ಮಾತನಾಡಿ ಬಸವಣ್ಣ ತಮ್ಮ ವಚನದಲ್ಲಿ ಮಾದಾರ ಚೆನ್ನಯ್ಯನ ಮನೆಯ ಮಗ ನಾನು ಕೂಡಲ ಸಂಗಮದೇವನ ಸಾಕ್ಷಿಯಾಗಿ ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

ಮಾದಾರ ಚೆನ್ನಯ್ಯನ ಮನೆ ಅಂಬಲಿಯನ್ನುಂಡು ಬೆಳೆದೆನೆಂದು ಹೇಳುತ್ತಾರೆ'ಅಂತಹ ಚೆನ್ನಯ್ಯ ನಮ್ಮ ಕುಲತಿಲಕ. ಅವರನ್ನು ನಾವು ನಿತ್ಯವೂ ಸ್ಮರಿಸಬೇಕು. ಬಸವಾದಿ ಶರಣರ ವಚನಗಳನ್ನು ನಿತ್ಯ ಓದಿ ಅವುಗಳನ್ನು ನಮ್ಮ ಬದುಕಿನಲ್ಲಿಅಳವಡಿಸಿಕೊಂಡರೆ ಬದುಕು ಹಸನಾಗುತ್ತದೆ' ಎಂದರು. ಈ ಸಂದರ್ಭದಲ್ಲಿ ಮಲ್ಲಯ್ಯ ಮುರಾರಿ, ಸಿದ್ರಾಮಪ್ಪ ಕೊಠಾರಿ ಮುದುಕಪ್ಪ ದಾಸರ, ಕಾಶೀಮಪ್ಪ ಡಿ ಮುರಾರಿ, ದುರುಗಪ್ಪ ಮುರಾರಿ, ಚಂದ್ರಕಾಂತ್ ಮುರಾರಿ, ಅಶೋಕ್ ಮುರಾರಿ, ಪ್ರಶಾಂತ್ ದಾನಪ್ಪ, ಗಂಗಾಧರ್ ಮುರಾರಿ, ಕಿರಣ್ ವಿ ಮುರಾರಿ, ಪ್ರಶಾಂತ್ ಕೊಠಾರಿ ಸೇರಿದಂತೆ ಸಮಾಜದ ಇನ್ನಿತರ ಮುಖಂಡರು ಇದ್ದರು.

# ಮಾನ್ವಿ ಬಸ್‌ಸ್ಟ್ಯಾಂಡ್ ಬಳಿ ಮೂತ್ರಾಲಯ ರಸ್ತೆ ಇಕ್ಕೆಲುಗಳಲ್ಲಿ ದುರ್ವಾಸನೆ, ಜನರಿಗೆ ತೊಂದರೆ :ಮಲ್ಲನಗೌಡ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಬಸ್ ಸ್ಟ್ಯಾಂಡ್ ಎದುರುಗಡೆಯ ಸಾರ್ವಜನಿಕ ಶೌಚಾಲಯ ಮುಂಭಾಗದ ರಸ್ತೆ ದಿನೇ ದಿನೇ ಹೆಚ್ಚುತ್ತಿರುವ ಅಶುಚಿ, ಕಸ, ಮೂತ್ರದ ದುರ್ವಾಸನೆಯ ಬಗ್ಗೆ ಗಂಭೀರವಾಗಿ ಗಮನಸೆಳೆಯುವಂತೆ ಕರ್ನಾಟಕ ವೀರ ಸಮರ ಸಂಘ ತಾಲೂಕು ಘಟಕ ಪುರಸಭೆ ಮುಖ್ಯಾಧಿಕಾರಿ ಪರಶುರಾಮ್ ದೇವಮಾನೆ ರವರಿಗೆ ಮನವಿ ಸಲ್ಲಿಸಿತ್ತು.**




ತಾಲೂಕು ಅಧ್ಯಕ್ಷ ಮಲ್ಲನಗೌಡ ಬೈಲಮರ್ಚಡ್ ಮಾತನಾಡಿ, "ಮೂತ್ರಾಲಯ ಹಾಗೂ ರಸ್ತೆಯ ಎರಡು ಬದಿಗಳಲ್ಲಿ ಹಲವು ದಿನಗಳಿಂದ ಕಸ ತುಂಬಿ ಗಬ್ಬೆದ್ದು ನಾರುತ್ತಿದೆ. ಜನರು ತಿರುಗಾಡಲು ಸಹ ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ರೀತಿಯ ಅಶುಚಿ ರೋಗ?ರುಜುನಗಳಿಗೆ ಕಾರಣವಾಗುತ್ತಿದೆ. ಪಟ್ಟಣದಲ್ಲಿ ಬಹುತೇಕ ಕಡೆ ರಸ್ತೆಯ ಬದಿಗಳು ಕಸದ ರಾಶಿ ಹಾಗೂ ಧೂಳಿನಿಂದ ತುಂಬಿದ್ದು, ಉಸಿರಾಟ ಮತ್ತು ಕಣ್ಣುಗಳಿಗೆ ತೊಂದರೆ ಉಂಟುಮಾಡುತ್ತಿದೆ. ಪ್ರತಿದಿನ ಸ್ವಚ್ಛತೆ ಕಾರ್ಯ ಕೈಗೊಳ್ಳಬೇಕು," ಎಂದು ಹೇಳಿದರು.

ಅವರು ಮುಂದುವರಿಸಿ, "ನಗರ ರಸ್ತೆಗಳ ಮೇಲಿರುವ ಮಣ್ಣು ಹಾಗೂ ಧೂಳನ್ನು ಯಂತ್ರದಿಂದ ಸ್ವಚ್ಛಗೊಳಿಸಿ ಜನ–ರಿಗೆ ಆರಾಮದಾಯಕ ಪರಿಸರ ಕಲ್ಪಿಸುವುದು ಪುರಸಭೆಯ ಜವಾಬ್ದಾರಿ. ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಸಂಘಟನೆಯಿಂದ ಪ್ರತಿಭಟನೆ ನಡೆಸಬೇಕಾಗುತ್ತದೆ," ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಸಂಘದ ಗೌರವಾಧ್ಯಕ್ಷ ಅಫ್ರೂಸ್ ಸಾಹೇಬ್, ಜಿಲ್ಲಾ ಉಪಾಧ್ಯಕ್ಷ ಬಸವರಾಜ ಮೇಟಿಗೌಡ ಹಿರೇಕೊಟ್ನೆಕಲ್, ದೊಡ್ಡಪ್ಪ ಹೂಗಾರ, ಹನುಮೇಶ ನಾಯಕ ಬೈಲಮರ್ಚಡ್, ವಿಜಯಕುಮಾರ ಸುಂಕೇಶ್ವರ, ಮಲ್ಲಿಕಾರ್ಜುನ ಛಲುವಾದಿ, ವೆಂಕಟೇಶ, ತಿಮ್ಮಯ್ಯ, ಆಲಂಪಾಷಾ, ನಜೀರ್ ಇದ್ದರು.

# ಶಿಕ್ಷಕ ಬಸವರಾಜ ಪಲಕನಮರಡಿ ಅವರಿಗೆ ರಾಷ್ಟ ಪ್ರಶಸ್ತಿ

ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣ ಸಮೀಪದ ನವಲಕಲ್ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆಸಲ್ಲಿಸುತ್ತಿರುವ ಶಿಕ್ಷಕ ಬಸವರಾಜ ಪಲಕನಮರಡಿ ಅವರಿಗೆ ಬೆಳಕು ಸಂಭ್ರಮ ಸಮಿತಿ ವತಿಯಿಂದ ರಾಷ್ಟ್ರ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.**



'ಇವರು ಮಾನ್ವಿ ತಾಲ್ಲೂಕಿನಲ್ಲಿ ಮೂವತ್ತು ವರ್ಷಗಳಕಾಲ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ್ದು 5 ವರ್ಷ ಪಾಮನಕಲ್ಲುರು ವಲಯದ ಸಂಪನ್ಮೂಲ ವ್ಯಕ್ತಿಯಾಗಿ, ಕವಿತಾಳ ವಲಯದಲ್ಲಿ 5 ವರ್ಷಗಳಕಾಲ, ಸಿವರಾರ ಹಾಗೂ ಕವಿತಾಳ ಪದವಿ ಪೂರ್ವ ಕಾಲೇಜಿನಲ್ಲಿ 9 ವರ್ಷಗಳ ಕಾಲ ಉಪನ್ಯಾಸಕರಾಗಿ, ಮತು ದೇವದುರ್ಗ ಸರಕಾರಿ ಪ್ರಥ–'ಮ ದರ್ಜೆ ಕಾಲೇಜಿನಲ್ಲಿ ಮೂರು ವರ್ಷ ಎಂಟು ತಿಂಗಳು ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವ ಇವರು ಜಿಲ್ಲಾ ಹಂತದಲ್ಲಿ, ತಾಲ್ಲೂಕ ಹಂತದಲ್ಲಿ 15 ವರ್ಷಗಳಿಂದ ತರಬೇತಿಯನ್ನು ನೀಡುತ್ತಾ ಬಂದಿದ್ದು ಇವರ ಸೇವೆಯನ್ನು ಗುರುತಿಸಿ ಬೆಳಕು ಸಂಸ್ಥೆ ವತಿಯಿಂದ ರಾಷ್ಟ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಮಾಡಲಾಗಿದೆ ' ಎಂದು ಬೆಳಕು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಅಣ್ಣಪ್ಪ ಮೇಟಿಗೌಡ ತಿಳಿಸಿದ್ದಾರೆ.

# ದೆಹಲಿಯಲ್ಲಿ ಬಿಡು ಬಿಟ್ಟಿರುವ ಬಿಜೆಪಿ ಭಿನ್ನಮತೀಯ ನಾಯಕರು

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಕಳೆದ ಮೂರು ದಿನಗಳಿಂದ ನವದೆಹಲಿಯಲ್ಲಿ ಬಿಡು ಬಿಟ್ಟಿರುವ ಬಿಜೆಪಿ ಭಿನ್ನಮತೀಯ ನಾಯಕರು ರಾಜ್ಯ ಉಸ್ತುವಾರಿ ಡಾ.ಮೋಹನ್ ಅಗರ್ ವಾಲ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ.**



ಕಳೆದ ತಡರಾತ್ರಿ ನವದೆಹಲಿಯಲ್ಲಿ ರಾಧಾ ಮೋಹನ್ ಅಗರ್ ವಾಲ್ ಅವರ ನಿವಾಸದಲ್ಲಿ ಭಿನ್ನಮತೀಯ ಬಣ ಭೇಟಿಯಾಗಿ ಪಕ್ಷದೊಳಗಿನ ಪ್ರಸಕ್ತ ವಿದ್ಯಮಾನಗಳ ಕು–ರಿತು ಚರ್ಚೆ ನಡೆಸಿದ್ದಾರೆ.ಶಾಸಕರಾದ ರಮೇಶ್ ಜಾರಕಿಹೊಳಿ, ಬಿ.ಪಿ.ಹರೀಶ್, ಮಾಜಿ ಸಂಸದರಾದ ಜಿ.ಎಂ.ಸಿದ್ದೇಶ್ವರ್, ಬಿ.ವಿ.ನಾಯಕ್, ಮಾಜಿ ಸಚಿವ ಕುಮಾರ್ ಬಂಗಾರಪ್ಪ ಮತ್ತಿತರ ಪ್ರಮುಖರು ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಮಾತಕತೆ ನಡೆಸಿದ್ದು, ಭೇಟಿಯ ಬಗ್ಗೆ ಮಾಧ್ಯಮಗಳಿಗೆ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲವಾದರೂ ರಾಜ್ಯ ಅಧ್ಯಕ್ಷರ ಬದಲಾವಣೆ ಮಾಡಲು ಬೇಡಿಕೆ ಇಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಯಾವುದೇ ಸಂದರ್ಭದಲ್ಲಿ ಕರ್ನಾಟಕ ಬಿಜೆಪಿ ಘಟಕಕ್ಕೆ ದೆಹಲಿ ನಾಯಕರು ಅಧ್ಯಕ್ಷರನ್ನು ನೇಮಕ ಮಾಡಬಹುದೆಂಬ ಸುಳಿವು ಸಿಕ್ಕ ಹಿನ್ನೆಲೆಯಲ್ಲಿ ಬಿ.ವೈ.ವಿಜಯೇಂದ್ರ ಅವರನ್ನು ನೇಮಕ ಮಾಡದಂತೆ ವಿರೋಧಿ ಬಣ ಉಸ್ತುವಾರಿ ಬಳಿ ಬೇಡಿಕೆ ಇಟ್ಟಿದೆ.

ಆದರೆ ಈ ಬಗ್ಗೆ ಯಾವುದೇ ಸ್ಪಷ್ಟ ಭರವಸೆ ನೀಡದ ಅಗರ್ವಾಲ್ ವರಿಷ್ಠರ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಬೇಕು. ನಾವು ಅವರನ್ನೇ ಮುಂದುವ–ರಿಸುತ್ತೇವೆಂದು ಹೇಳಿಲ್ಲ. ಹಾಗಂತ ಅವರನ್ನು ಬದಲಾವಣೆ ಮಾಡಿದರೆ ಮಾಡಲೂಬಹುದು. ಅಂತಿಮವಾಗಿ ಪಕ್ಷ ಹಾಗೂ ಕಾರ್ಯಕರ್ತರ ಹಿತ ದೃಷ್ಟಿಯಿಂದ ತೆಗೆದುಕೊಳ್ಳುವ ನೀವು ನಿರ್ಧಾರವನ್ನು ಎಲ್ಲರೂ ಒಪ್ಪಿಕೊಳ್ಳಬೇಕಿದೆ ಎಂದು ಹೇಳಿದ್ದಾರೆ. ಬಗ್ಗದ ಭಿನ್ನಮತೀಯರು: ರಾಜ್ಯ ಬಿಜೆಪಿ ಮನಯೊಂದು ಮೂರು ಬಾಗಿಲು ಎಂಬಂತಾಗಿದೆ. ಪಕ್ಷದಲ್ಲಿ ವಿಜಯೇಂದ್ರ ಪರವಾದ ಒಂದು ತಂಡ, ವಿರುದ್ಧವಾದ ಮತ್ತೊಂದು ತಂಡ ಹಾಗೂ ತಟಸ್ಥವಾದ ತಂಡವೊಂದು ಇದೆ.

# ಹಟ್ಟಿ ಚಿನ್ನದ ಗಣಿಯಲ್ಲಿ ಆರೋಗ್ಯ ಸೌಲಭ್ಯಗಳ ಕೊರತೆ

ನೈಜ್ಯ ದೆಸೆ ನ್ಯೂಸ್

**ಹಟ್ಟಿ ಚಿನ್ನದ ಗಣಿ, ರಾಯಚೂರು ಜಿಲ್ಲೆ: ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಗೌರವಾನ್ವಿತ ಡಾ. ನಾಗಲಕ್ಷ್ಮಿ ಚೌಧರಿ ರವರು ಹಟ್ಟಿ ಚಿನ್ನದ ಗಣಿಯ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಆಲಿಸಲು ಗಣಿಯ ಅಧಿಕಾರಿಗಳ ಕ್ಲಬ್‌ನಲ್ಲಿ ಸಂವಾದ ಕಾರ್ಯಕ್ರಮವನ್ನು ನಡೆಸಿದರು. ಕಾರ್ಯಕ್ರಮದ ಸಂದರ್ಭದಲ್ಲಿ ಜ್ಯೋತಿ ಮಹಿಳಾ ಒಕ್ಕೂಟದ ಸದಸ್ಯರು ಗಣಿಯಲ್ಲಿ ಕೆಲಸ ಮಾಡುತ್ತಿರುವ 4000 ಕಾರ್ಮಿಕರು ಹಾಗೂ ಹಟ್ಟಿಯ ಸಾಮಾನ್ಯ ನಾಗರಿಕರು ಎದುರಿಸುತ್ತಿರುವ ತೀವ್ರ ಆರೋಗ್ಯ ಸಮಸ್ಯೆಗಳ ಕುರಿತು ಆಯೋಗದ ಅಧ್ಯಕ್ಷೆಗೆ ಅಧಿಕೃತವಾಗಿ ಮನವಿ ಸಲ್ಲಿಸಿದರು.**



ಮುಖ್ಯ ಅಂಶಗಳು ಕಾರ್ಮಿಕರ ಆರೋಗ್ಯ ಸಮಸ್ಯೆಗಳು: ಗಣಿಯು ನೂರಾರು ಕೋಟಿ ಲಾಭ ಗಳಿಸುತ್ತಿದ್ದರೂ, ತನ್ನ ಕಾರ್ಮಿಕ–ರಿಗೆ ಅಗತ್ಯವಾದ ಮೂಲಭೂತ ವೈದ್ಯಕೀಯ ಸೌಲಭ್ಯಗಳ ಕೊರತೆ ಇದೆ. ಗಣಿಯ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞರು ಹೆರಿಗೆ ತಜ್ಞರು ಗರ್ಭಿಣಿ ಮಹಿಳೆಯರಿಗಾಗಿ ಸ್ಕ್ಯಾನಿಂಗ್ ಕೇಂದ್ರ ಇಲ್ಲದೇ ಇರುವುದರಿಂದ ಮಹಿಳಾ ಕಾರ್ಮಿಕರು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. 4000 ಕಾರ್ಮಿಕರಿಗೆ ಕೇವಲ ಒಬ್ಬನೇ ಎಂ.ಡಿ ವೈದ್ಯರು ಇದ್ದಾರೆ. ಜನರಲ್ ಮೆಡಿಸಿನ್ ಹೃದಯ ತಜ್ಞ ಅನಸ್ತೀಷಿಯಾ ಬಿಪಿ/ಶುಗರ್ ತಜ್ಞರು ಆರ್ಥೋಪೆಡಿಕ್ ತಜ್ಞರು ಸೇ–ರಿದಂತೆ ಯಾವುದೇ ವಿಶೇಷ ವೈದ್ಯರು ಇಲ್ಲದಿರುವುದು ಗಂಭೀರ ಸಮಸ್ಯೆಯಾಗಿದೆ.

ಭೂಗರ್ಭದಲ್ಲಿ ಅಪಘಾತ ಸಂಭವಿಸಿದಾಗ ತಕ್ಷಣ ಸ್ಪಂದಿಸಲು ಅಗತ್ಯವಾದ ಐಸಿಯು ಯುನಿಟ್ ಆಸ್ಪತ್ರೆಯಲ್ಲಿ ಇಲ್ಲ. ಗಂಭೀರ ಅಪಘಾತದ ಸಂದರ್ಭಗಳಲ್ಲಿ ರೋಗಿಗಳನ್ನು ಬಾಗಲಕೋಟೆ, ರಾಯಚೂರು, ಬೆಳಗಾವಿ, ಬೆಂಗಳೂರು ಮುಂತಾದ ದೂರದ ಆಸ್ಪತ್ರೆಗೆ ಕರೆದೊಯ್ಯಬೇಕಾಗುತ್ತದೆ. ಇದರಿಂದ ಕಾರ್ಮಿಕರು ಅಂಬುಲೆನ್ಸ್‌ನಲ್ಲಿ ನೋವಿನಿಂದ ತೊಳಲುತ್ತಾ ದೂರ ಪ್ರಯಾಣಿಸಬೇಕಾಗುತ್ತಿದ್ದು, ಮಧ್ಯ ದಾರಿಯಲ್ಲೇ ಪ್ರಾಣ ಕಳೆದುಕೊಂಡ ಘಟನೆಗಳೂ ಸಂಭವಿಸಿದ್ದವು ಎಂದು ಮನವಿಯಲ್ಲಿ ಉಲ್ಲೇಖಿಸಲಾಯಿತು.

ಒಕ್ಕೂಟದ ಬೇಡಿಕೆಗಳು: 1. ಹಟ್ಟಿ ಚಿನ್ನದ ಗಣಿ ಆಸ್ಪತ್ರೆಯಲ್ಲಿ ತಕ್ಷಣವೇ ತಜ್ಞ ವೈದ್ಯರ ನೇಮಕ ಐಸಿಯು ಘಟಕ ಸ್ಥಾಪನೆ ಸ್ಕ್ಯಾನಿಂಗ್ ಕೇಂದ್ರ ಮಹಿಳಾ ಮತ್ತು ಶಿಶುರೋಗ ತಜ್ಞರ ನೇಮಕ ಸೇರಿದಂತೆ ಅಗತ್ಯವಾದ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕು. 2. ಹಟ್ಟಿ ಪಟ್ಟಣದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಖಾಯಂ ಆರೋಗ್ಯಾಧಿಕಾರಿಯನ್ನು ನೇಮಕ ಮಾಡಬೇಕು. ಮನವಿ ಸಲ್ಲಿಸಿದವರು: ಜ್ಯೋತಿ ಮಹಿಳಾ ಒಕ್ಕೂಟದ ಸದಸ್ಯರು ಅಂಬಿಕಾ, ನಿರ್ಮಲಾ, ಚಂದ್ರಲೇಖಾ, ಸುಮಂಗಲಾ, ಪರಿಮಳ, ಜ್ಯೋತಿ ಸುಶೀಲಮ್ಮ, ಮೇರಿ ಪುಷ್ಪ, ಸಾಮಾಜಿಕ ಕಾರ್ಯಕರ್ತರು ಸುರೇಶ್ ಗೌಡ ಗುರಿಕಾರ, ಲಾಲ್ ಪೀರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### MD ಕ್ರಿಯಾ ಶರೀರ

MD ಕ್ರಿಯಾ ಶರೀರ ಈ ಕೋರ್ಸ್‌ನಲ್ಲಿ ದೇಹದಲ್ಲಿ ನಡೆಯುವ ಸಕಲ ಕ್ರಿಯೆಗಳು, ಅವುಗಳ ದೋಷ ಧಾತು ಮಲಗಳ ಮೇಲೆ ಪರಿಣಾಮ, ಮತ್ತು ಆಯುರ್ವೇದೀಯ + ವೈಜ್ಞಾನಿಕ ಕ್ರಿಯಾಶಾಸ್ತ್ರ ಎರಡನ್ನೂ ಆಳವಾಗಿ ಕಲಿಸಲಾಗುತ್ತದೆ. ಇದು ದೇಹದ "ಜೀವಪ್ರವೃತ್ತಿ" ಯನ್ನು ವಿವರಿಸುತ್ತದೆ: ಶರೀರ ಕ್ರಿಯಾಶಾಸ್ತ್ರ ಆಯುರ್ವೇದದ ಒಂದು ವಿಶೇಷತೆಯಾಗಿದ್ದು, ದೇಹ ಮತ್ತು ಮನಸ್ಸಿನ ಸಾಮಾನ್ಯ ಕಾರ್ಯಾಚರಣೆಗಳ ಅಧ್ಯಯನವನ್ನು ಒಳಗೊಂಡಿದೆ. ಶರೀರ ಹಲವಾರು ಮೂಲಭೂತ ತತ್ತ್ವಗಳಿಂದ ನಿರ್ಮಿತವಾಗಿದೆ. 'ಕ್ರಿಯಾ' ಎಂದರೆ ಚಲನೆಯಲ್ಲಿರುವ ಅಥವಾ ಕ್ರಿಯೆ ನಡೆಸಬಲ್ಲದೇ ಆಗಿದ್ದು, ಶರೀರವು ತನ್ನ ಕ್ರಿಯೆಯನ್ನು ಆನುಷ್ಠಾನ ಮಾಡುತ್ತದೆ, ಆದರೆ ಆ ಮೂಲಭೂತ ತತ್ತ್ವಗಳು ಸಮತೋಲನ ಸ್ಥಿತಿಯಲ್ಲಿ ಇದ್ದಾಗ ಮಾತ್ರ. ಈ ವಿಷಯವು ಆದ್ದರಿಂದ ಆಯುರ್ವೇದವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಆಧಾರವಾಗಿದೆ. ಎಲ್ಲಾ ವೈದ್ಯಕೀಯ ವಿದ್ಯಾರ್ಥಿಗಳಿಗೆ ಈ ವಿಷಯವು ಬಹಳ ಮಹತ್ವದ್ದಾಗಿದೆ, ಏಕೆಂದರೆ ಇದು ಇತರೆ ಪರಿಕ್ಲಿನಿಕಲ್ ಮತ್ತು ಕ್ಲಿನಿಕಲ್ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯಮಾಡುತ್ತದೆ. ಸಾಮಾನ್ಯತೆಯ ಕುರಿತು ಸರಿಯಾದ ಜ್ಞಾನವು ಅಸಾಮಾನ್ಯತೆಯನ್ನು ಅಂ-ದಾಜಿಸಲು ಮತ್ತು ನಂತರ ಸರಿಯಾದ ಚಿಕಿತ್ಸೆ ಆಯ್ಕೆಮಾಡಲು ಬಹಳ ಅಗತ್ಯವಾಗಿದೆ. ವಿಭಾಗವು ಪೋಸ್ಟ್‌ಗ್ರಾಜುಯೇಷನ್ ಕೋರ್ಸ್ ಅನ್ನು 2010ರಲ್ಲಿ ಪ್ರಾರಂಭಿಸಿತು, ಇದು ದಕ್ಷಿಣ ಭಾರತದ ಮೊದಲ ಕೋರ್ಸ್ ಆಗಿತ್ತು. ಈ ವಿಭಾಗದಲ್ಲಿ ವಿಷಯವನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಲು ಸೂಕ್ತವಾಗಿ ಸ್ಥಾಪಿತ ಮ್ಯೂಸಿಯಂ ಮತ್ತು ಪ್ರಯೋಗಶಾಲೆ ಇದೆ ಮತ್ತು ಆಧುನಿಕ ಉಪಕರಣಗಳೊಂದಿಗೆ ಸಂಚಾಲಿತವಾಗಿದೆ.3 ವರ್ಷಗಳ ಪೂರ್ಣ ಸಮಯದ ಸ್ನಾತಕೋತ್ತರ ಆಯುರ್ವೇದ ಕೋರ್ಸ್ ಆಗಿದ್ದು, ಇದು ಆಯುರ್ವೇದದ ಪ್ರಕಾರ ಮಾನವ ದೇಹದ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡುತ್ತದೆ. ಈ ಕೋರ್ಸ್‌ನಲ್ಲಿ, ಶರೀರಶಾಸ್ತ್ರ (Physiology), ದೈಹಿಕ ವ್ಯವಸ್ಥೆಗಳು, ರೋಗನಿರ್ಣಯ ವಿಧಾನಗಳು ಮತ್ತು ಚಿಕಿತ್ಸಕ ತಂತ್ರಗಳ ಆಳವಾದ ಅಧ್ಯಯನವನ್ನು ಒಳಗೊಂಡಿರುತ್ತದೆ. ಪ್ರವೇಶವು ಮುಖ್ಯವಾಗಿ ಅಖಿಲ ಭಾರತ ಸ್ನಾತಕೋತ್ತರ ಪ್ರವೇಶ ಪರೀಕ್ಷೆ (AIAPGET) ಆಧಾರಿತವಾಗಿರುತ್ತದೆ. ಮಾನವ ದೇಹದ ಕಾರ್ಯನಿರ್ವಹಣೆಯ ಆಳವಾದ ಅಧ್ಯಯನ , ಆಯುರ್ವೇದದ ತತ್ವಗಳ ಆಧಾರದ ಮೇಲೆ ದೈಹಿಕ ವ್ಯವಸ್ಥೆಗಳ ಅಧ್ಯಯನ, ರೋಗನಿರ್ಣಯ ವಿಧಾನಗಳು. ಚಿಕಿತ್ಸಕ ತಂತ್ರಗಳು ಈ ಕೋರ್ಸ್ ಆಯುರ್ವೇದದ ಪ್ರಕಾರ ಮಾನವ ದೇಹದ ಕ್ರಿಯಾತ್ಮಕ ಅಂಶಗಳ ಮೇಲೆ ಕೇಂದ್ರೀಕರಿಸುತ್ತದೆ. ಇದು ಸಮಗ್ರ ಮತ್ತು ನೈಸರ್ಗಿಕ ವಿಧಾನಗಳ ಮೂಲಕ ಆರೋಗ್ಯ ಮತ್ತು ರೋಗ ನಿರ್ವಹಣೆಗೆ ಒತ್ತು ನೀಡುತ್ತದೆ.ಆಧುನಿಕ ಅಂಗರಚನಾಶಾಸ್ತ್ರ ಮತ್ತು ಶರೀರಶಾಸ್ತ್ರದೊಂದಿಗೆ ಸಮಾನಾಂತರಗಳನ್ನು ಕಲಿಯಬಹುದು, ಇದು ಹಳೆಯ ಮತ್ತು ಹೊಸ ಜ್ಞಾನದ ಸಮ್ಮಿಶ್ರಣ-ಕ್ಕೆ ಕಾರಣವಾಗುತ್ತದೆ. ಅಖಿಲ ಭಾರತ ಸ್ನಾತಕೋತ್ತರ ಪ್ರವೇಶ ಪರೀಕ್ಷೆ (AIAPGET) ಆಧಾರಿತ ಪ್ರವೇಶ ಕೆಲವು ಕಾಲೇಜುಗಳಲ್ಲಿ ನಿರ್ವಹಣಾ ಕೋಟಾದಲ್ಲಿಯೂ (Management Quota) ಸೀಟುಗಳು ಲಭ್ಯವಿರಬಹುದು. ಮೊದಲಿಗೆ ಬಂದವ-ರಿಗೆ ಆದ್ಯತೆ ನೀಡಲಾಗುತ್ತದೆ. ಶರೀರ ಕ್ರಿಯಾಶಾಸ್ತ್ರವು ದೇಹದ ತ್ರಿದೋಷ, ಧಾತು, ಮಲ, ಅಗ್ನಿ, ಪ್ರಾಣ ಮತ್ತು ಮನೋಕ್ರಿಯೆ ಗಳ ಸಮತೋಲನವನ್ನು ಅಧ್ಯಯನ ಮಾಡುತ್ತದೆ. ಆಯುರ್ವೇದ ಮತ್ತು ಆಧುನಿಕ ಭೌತಶಾಸ್ತ್ರದ (Modern Physiology) ಸಿದ್ಧಾಂತಗಳನ್ನು ಸಮನ್ವಯಗೊಳಿಸುತ್ತದೆ. ವಿದ್ಯಾರ್ಥಿಗಳು ಲ್ಯಾಬ್ ವ್ಯಾಯಾಮಗಳು, ಪ್ರಾಯೋಗಿಕ ಪರೀಕ್ಷೆಗಳು, ಮತ್ತು ಕ್ಲಿನಿಕಲ್ physiologic correlation ಗಳ ಮೂಲಕ ವಿಷಯವನ್ನು ಆಳವಾಗಿ ಕಲಿಯುತ್ತಾರೆ. ಈ ಕೋರ್ಸ್ ವಿಜ್ಞಾನಾತ್ಮಕ ಸಂಶೋಧನೆ ಮತ್ತು UG ಬೋಧನೆಗೆ ಸಹಾಯಕವಾಗಿದೆ

## ಡಿಸೆಂಬರ್ 6 ರಿಂದ 10ರವರೆಗೆ ಕೃಷಿ ವಿವಿಯಲ್ಲಿ ಕ್ರೀಡಾ ಪಂದ್ಯಾವಳಿಗಳ ಆಯೋಜನೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 04 (ಕರ್ನಾಟಕ ವಾರ್ತೆ): ಇಲ್ಲಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ಡಿಸೆಂಬರ್ 6 ರಿಂದ 10ರವರೆಗೆ 5 ದಿನಗಳ ಅವಧಿಯ ಅಂತರ-ಮಹಾವಿದ್ಯಾಲಯಗಳ ಗುಂಪು ಕ್ರೀಡಾ ಪಂದ್ಯಾವಳಿಗಳನ್ನು ಆಯೋಜಿಸಲಾಗಿದೆ. ಪಂದ್ಯಾವಳಿಯಲ್ಲಿ ವಾಲಿಬಾಲ್ (ಪುರುಷ ಮತ್ತು ಮಹಿಳೆಯರು), ಖೋ-ಖೋ (ಪುರುಷ ಮತ್ತು ಮಹಿಳೆಯರು), ಟೇಬಲ್ ಟೆನ್ನಿಸ್ (ಪುರುಷ ಮತ್ತು ಮಹಿಳೆಯರು), ಕಬಡ್ಡಿ (ಪುರುಷರು) ಹೀಗೆ ಗುಂಪು ಪಂದ್ಯಾವಳಿಗಳನ್ನು ಆಯೋಜಿಸಲಾಗಿದೆ.**

ಗುಂಪು ಕ್ರೀಡಾ ಪಂದ್ಯಾವಳಿಗಳಿಗೆ ವಿಶ್ವವಿದ್ಯಾಲಯದ ಗೌರವಾನ್ವಿತ ಕುಲಪತಿಗಳಾದ ಡಾ. ಎಂ. ಹನುಮಂತಪ್ಪರವರು ಡಿಸೆಂಬರ್ 6 ರಂದು ಚಾಲನೆ ನೀಡುವರು. ಈ ಪಂದ್ಯಾವಳಿಗಳಲ್ಲಿ ಕೃಷಿ ಮಹಾವಿದ್ಯಾಲಯ ರಾಯಚೂರು, ಭೀಮರಾಯನಗುಡಿ, ಕಲಬುರಗಿ, ಗಂಗಾವತಿ, ಹಗರಿ, ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರು ಹಾಗೂ ರಾಯಚೂರಿನ ಕೃಷಿ ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನೊಳಗೊಂಡಂತೆ 320 ವಿದ್ಯಾರ್ಥಿಯರು ಹಾಗೂ 200 ವಿದ್ಯಾರ್ಥಿನಿಯರು ಭಾಗವಹಿಸುವರು. ಈ ಕ್ರೀಡಾಕೂಟವನ್ನು ರಾಯಚೂರಿನ ಕೃಷಿ ತಾಂತ್ರಿಕ ಮಹಾವಿದ್ಯಾಲಯವು ಆಯೋಜಿಸುತ್ತಿದೆ ಎಂದು ವಿಶ್ವವಿದ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

## ಜೆಸ್ಕಾಂನಿಂದ ಇಂದು ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು ಡಿಸೆಂಬರ್ 04 (ಕರ್ನಾಟಕ ವಾರ್ತೆ): ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆಯ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 33/11 ಕೆವಿಯ ಚಂದ್ರಬಂಡ ಮತ್ತು ಜವಾಹರನಗರದ ವಿದ್ಯುತ್ ಉಪ-ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಡಿಸೆಂಬರ್ 05ರ ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮ್ಮು ಪಾಲನೆ ಉಪ-ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## ಪಲ್ಸ್ ಪೋಲಿಯೋ ಕಾರ್ಯಕ್ರಮದ ಪೂರ್ವಸಿದ್ಧತಾ ಸಭೆ ಪಲ್ಸ್ ಪೋಲಿಯೋ ಗುರಿ ತಲುಪಲು ಅಗತ್ಯ ಕ್ರಮವಹಿಸಿ: ಜಿಲ್ಲಾಧಿಕಾರಿ ನಿತೀಶ್ ಕೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು ಡಿಸೆಂಬರ್ 04 (ಕರ್ನಾಟಕ ವಾರ್ತೆ): ರಾಷ್ಟಿಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದಡಿ ಇದೇ ಡಿ.21 ರಿಂದ 24ರವರೆಗೆ ರಾಷ್ಟಿಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಜಿಲ್ಲೆಯಲ್ಲಿ 5 ವರ್ಷದೊಳಗಿನ 2,55,257 ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಗುರಿ ಹೊಂದಲಾಗಿದ್ದು, ಗುರಿ ತಲುಪಲು ಅಗತ್ಯ ಕ್ರಮವಹಿಸಬೇಕೆಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.**



ಡಿಸೆಂಬರ್ 04ರ ಗುರುವಾರ ದಂದು ನಗರದ ನೂತನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಪೂರ್ವಸಿದ್ಧತಾ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ರಾಮೀಣ ಮತ್ತು ನಗರ ಪ್ರದೇಶದ ಎಲ್ಲ ಮಕ್ಕಳಿಗೆ ಪೋಲಿಯೋ ಲಸಿಕಾ ಕಾರ್ಯಕ್ರಮ ಏರ್ಪಡಿಸಲಾಗಿದೆ. ಜಿಲ್ಲೆಯಲ್ಲಿನ 0-5 ವರ್ಷದೊಳಗಿನ ಯಾವುದೇ ಮಗು ಲಸಿಕೆ ಸೌಲಭ್ಯದಿಂದ ಹೊರಗುಳಿಯಬಾರದು. ವಿವಿಧ ರಾಜ್ಯಗಳಿಂದ ಉದ್ಯೋಗ ಹರಸಿ ಬಂದಂತಹ ಕಾರ್ಮಿಕ ಕುಟುಂಬ ಮಕ್ಕಳನ್ನೂ ಗುರುತಿಸಿ ಲಸಿಕೆ ಹಾಕಬೇಕು ಎಂದು ತಿಳಿಸಿದರು.

ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ವಿವಿಧ ಇಲಾಖೆಗಳ ಅಧಿಕಾರಿಗಳು ತಮ್ಮ ಇಲಾಖೆ ವಾಹನಗಳನ್ನು ನಿಗದಿತ ಸಮಯಕ್ಕೆ ನಿಯೋಜಿಸಬೇಕು. ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಯಾವುದೇ ರೀತಿಯ ತೊಂದರೆಯಾಗದಂತೆ ಸಂಬಂಧಿಸಿದ ಅಧಿಕಾ-ರಿಗಳು ಕ್ರಮವಹಿಸಬೇಕು ಎಂದು ಸೂಚಿಸಿದರು. ಈ ಕಾರ್ಯಕ್ರಮ ವ್ಯಾಪಕ ಪ್ರಚಾರಕ್ಕಾಗಿ ಶಾಲಾ ಮಕ್ಕಳಿಂದ ಜಾಥಾ ಏರ್ಪಡಿಸುವುದರ ಮೂಲಕ ಸಾರ್ವಜನಿಕರಲ್ಲಿ ಪಲ್ಸ್ ಪೋಲಿಯೋ ಲಸಿಕೆ ಕುರಿತು ಜಾಗೃತಿ ಮೂಡಿಸಬೇಕು. ಸ್ಥಳೀಯ ಸಂಸ್ಥೆಗಳ ವತಿಯಿಂದ ಪಲ್ಸ್ ಪೋಲಿಯೋ ಕಾರ್ಯಕ್ರಮದ ಕುರಿತು ಆಡಿಯೋ ಮೂಲಕ ಕಸ ವಿಲೇವಾರಿ ವಾಹನಗಳಲ್ಲಿ ಪ್ರಚುರಪಡಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಮಹತ್ವ ತಿಳಿಸಿ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ತಾಯಂದಿರ ಸಭೆಗಳಲ್ಲಿ ಲಸಿಕಾ ದಿನಾಂಕಗಳ ಕುರಿತು, ಪಲ್ಸ್ ಪೋಲಿಯೋ ಕಾರ್ಯಕ್ರಮದ ಮಹತ್ವದ ಕುರಿತು ತಿಳಿಸಬೇಕು. ಲಸಿಕಾ ದಿನ ಅಂಗನವಾಡಿ ಕೇಂದ್ರವನ್ನು ತೆರೆದಿಡಲು ಸೂಚಿಸಿ ಮಕ್ಕಳಿಗೆ ಲಸಿಕೆ ಹಾಕಿಸಬೇಕು. ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು, ಮೇಲ್ವಿಚಾರಕರು ಲಸಿಕಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು. ಅಲ್ಲದೆ ಜಿಲ್ಲೆಯ ಎಲ್ಲ ಸಿ.ಡಿ.ಪಿ.ಓ.ಗಳು ತಾಲ್ಲೂಕು ಮಟ್ಟದ ಅನುಷ್ಠಾನ ಸಮಿತಿ ಸದಸ್ಯರಾಗಿದ್ದು, ಕಾರ್ಯಕ್ರಮ ಸಮರ್ಪಕ ಅನುಷ್ಠಾನದ ಮೇಲ್ವಿಚಾರಣೆ ವಹಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮೀಣ ಭಾಗದ ಮಕ್ಕಳನ್ನು ಮರೆಯಬೇಡಿ: ಈ ವೇಳೆ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ಮಾತನಾಡಿ, ಜಿಲ್ಲೆಯಲ್ಲಿನ ಯಾವುದೇ ಒಬ್ಬ ಮಗು ಸಹ ಲಸಿಕೆಯಿಂದ ಹೊರಗುಳಿಯಬಾರದು. ವಿಶೇಷವಾಗಿ ಗ್ರಾಮೀಣ ಮತ್ತು ಹೊಲಗಳಲ್ಲಿ ವಾಸಿಸುತ್ತಿರುವ ಮಕ್ಕಳನ್ನು ಗಮನಹರಿಸಿ ಅವರಿಗೂ ಕೂಡ ಪಲ್ಸ್ ಪೋಲಿಯೋ ಲಸಿಕೆ ನೀಡಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಕೂಲಿ ಕೆಲಸಕ್ಕೆ ತೆರಳುವ ಕಾರ್ಮಿಕರು ತಮ್ಮ ಮಕ್ಕಳನ್ನು ಕೆಲಸದ ಸ್ಥಳಗಳಲ್ಲಿ ಕಾಣ ಸಿಗುತ್ತಾರೆ. ಅವರನ್ನು ಗುರುತಿಸಿ ಪ್ರತಿಯೊಂದು ಮಗುವಿಗೂ ಲಸಿಕೆ ನೀಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ.ವಿಜಯಶಂಕರ್, ಜಿಲ್ಲಾ ಆರ್.ಸಿ.ಹೆಚ್.ಅಧಿಕಾರಿ ಡಾ.ನಂದಿತಾ ಎಮ್. ಎನ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರವೀಣ್ ಕುಮಾರ್, ಕಾರ್ಮಿಕ ಇಲಾಖೆಯ ಜಿಲ್ಲಾ ಅಧಿಕಾರಿ ಆರತಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಅಧಿಕಾರಿ ಶಿವಮಾನ್ಯಪ್ಪ, ಡಬ್ಲ್ಯುಹೆಚ್‌ಓ ಡಾ.ಅನೀಲ್ ತಾಳಿಕೊಟೆ, ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ.ಗಣೇಶ್, ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶಿವಕುಮಾರ್, ಟಿಬಿ ಅಧಿಕಾರಿ ಡಾ. ಎಂ.ಡಿ.ಸಾಜೀದ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ಸೇರಿದಂತೆ ಆರೋಗ್ಯ ಇಲಾಖೆಯ ವಿವಿಧ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಸಭೆಯಲ್ಲಿ ಇದ್ದರು.

## ಶಿಕ್ಷಕರ ಸಹಪಠ್ಯ ಚಟುವಟಿಕೆ ಸ್ಪರ್ಧೆಗಳು ಯಶಸ್ವಿ




ನೈಜ್ಯ ದೆಸೆ ನ್ಯೂಸ್

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಮತ್ತು ಕ್ಷೇತ್ರ ಸಂಪನ್ಮೂಲ ಕೇಂದ್ರಗಳ ಸಂಂ-ಯುಕ್ತಾಶ್ರಯದಲ್ಲಿ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯಿಂದ ಪ್ರಸ್ತುತ 2025-26ನೇ ಸಾಲಿನ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಸಹಪಠ್ಯ ಚಟುವಟಿಕೆಯ ಕಾರ್ಯಕ್ರಮದಲ್ಲಿ ಸ್ಪರ್ಧೆಗಳು ಯಶಸ್ವಿಯಾಗಿ ನಡೆದವು.**

ನಗರದ ಬಾಲಕರ ಸರ್ಕಾರಿ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಪ್ರಸ್ತುತ ಸಾಲಿನ ಸ್ಪರ್ಧೆಯಲ್ಲಿ ತಾಲೂಕಿನ ವಿವಿಧ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು ಭಾಗವಹಿಸಿದ್ದರು. ತಾಲೂಕು ಮಟ್ಟದ ಶಿಕ್ಷಕರ ಸಹಪಠ್ಯ ಚಟುವಟಿಕೆ ಉದ್ಘಾಟನೆಯಲ್ಲಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಚಂದ್ರಶೇಖರ್ ಹಿರೇಮಠ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷೆ ಮಾನಮ್ಮ ರಾಮದಾಸ್ ನಾಯಕ, ಪ್ರೌಢಶಾಲಾ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಬಸವರಾಜ ಬಾಲಕರ ಸರ್ಕಾರಿ ಪ್ರೌಢಶಾಲೆಯ ಪ್ರಭಾರಿ ಮುಖ್ಯೋಪಾಧ್ಯಾಯ ರವೀಂದ್ರಗೌಡ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ಸಂಯೋಜಕರು ಹಾಗೂ ಕಾರ್ಯಕ್ರಮ ನೋಡಲ್ ಅಧಿಕಾರಿಗಳಾದ ಕುಮಾರಸ್ವಾಮಿ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಿಕ್ಷಕ ಅಮರೇಶ ಹೂಗಾರ್ ಪ್ರಾರ್ಥಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ವೀರೇಶಪ್ಪ ಕಾರ್ಯಕ್ರಮ ನಿರೂಪಿಸಿದರೆ. ಕೊನೆಯಲ್ಲಿ ಶಿಕ್ಷಕ ರಾಮದಾಸ ನಾಯಕ್ ವಂದಿಸಿದರು. ವೇದಿಕೆ ಮೇಲೆ ಸಿ.ಆರ್.ಪಿ-ಬಿ.ಆರ್.ಪಿ ಸಂಘದ ಅಧ್ಯಕ್ಷ ಬಸವರಾಜ ಅಂಗಡಿ, ಅನುದಾನಿತ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ವಿಠಲ, ಚಿತ್ರಕಲಾ ಶಿಕ್ಷಕರ ಸಂಘದ ಪಿಎಲ್ ಪಾತ್ರೋಟಿ, ಜಿಪಿಟಿ ಶಿಕ್ಷಕರ ಸಂಘದ ಗೌರವಾಧ್ಯಕ್ಷ ಬಸವರಾಜ, ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕ ಚನ್ನಬಸವ, ಬಿ.ಆರ್.ಪಿಗಳಾದ ಬಸವರಾಜ ಆನೆಗುಂದಿ, ನಾಗಪ್ಪ ಕಲ್ಲೂರು, ಮೈನುದ್ದೀನ್ , ಶಿಕ್ಷಣ ಸಂಯೋಜಕರಾದ ಹನುಮಂತಪ್ಪ ನಾಯ್ಕರ್, ಹುಲುಗಪ್ಪ, ಜಿಪಿಟಿ ಸಂಘದ ತಾಲೂಕು ಅಧ್ಯಕ್ಷ ಹನುಮೇಶ, ನಿರ್ಣಾಯಕರಾಗಿ ತುಳಸಿದಾಸ, ವೀರೇಶ ಗೋನವಾರ, ವೀರೇಶ ಸಾಲಿಮಠ, ದುರುಗಪ್ಪ ಗುಡದೂರು ಸೇ-ರಿದಂತೆ ಅನೇಕರು ಉಪಸ್ಥಿತರಿದ್ದರು.

## ಮಟಕಾ, ಗಾಂಜಾ, ಇಸ್ಪೀಟ್, ಲಿಕ್ಕರ್ ಮಾಫಿಯ ದಂದೆ ಜೋರು; ರಾಜ್ಯ ಮಹಿಳಾ ಆಯೋಗಕ್ಕೆ ದೂರು

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಡಿ.05 ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ ಪಟ್ಟಣದಲ್ಲಿ ರಾಜಾರೋಷವಾಗಿ ಹೆಚ್ಚುತ್ತಿರುವ ಮಟಕಾ, ಕ್ರಿಕೆಟ್ ಬೆಟ್ಟಿಂಗ್, ಇಸ್ಪೀಟ್, ಗಾಂಜಾ ಮಾರಾಟ ಹಾಗೂ ಲಿಕ್ಕರ್‌ಮಾಫಿಯಾ ಚಟುವಟಿಕೆಗಳು ಸಾರ್ವಜನಿಕರಲ್ಲಿ ಆತಂಕ ಹೆಚ್ಚಿಸಿರುವುದ-ರಿಂದ ಕೂಡಲೇ ಕಡಿವಾಣ ಹಾಕಿ ತಕ್ಷಣವೇ ಕಠಿಣ ಕ್ರಮ ಕೈಗೊಳ್ಳುವಂತೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ನಾಗಲಕ್ಷ್ಮೀ ಚೌದರಿ ಅವರಿಗೆ ಹಟ್ಟಿ ಘಟಕದ ಜನವಾದಿ ಮಹಿಳಾ ಸಂಘಟನೆ ವತಿಯಿಂದ ಮನವಿ ಸಲ್ಲಿಸಿದರು.**



ಪಟ್ಟಣದ ಹಲವು ಭಾಗಗಳಲ್ಲಿ ಅಕ್ರಮ ದಂಧೆಗಳು ನಿರ್ಬಂಧವಿಲ್ಲದೆ ನಡೆಯುತ್ತಿರುವುದು ಸಮಾಜದ ಶಾಂತಿ-ಸುವ್ಯವಸ್ಥೆಗೆ ಧಕ್ಕೆ ತರುತ್ತಿದ್ದು, ಮಹಿಳೆಯರ ಸುರಕ್ಷತೆಗೂ ಗಂಭೀರ ಬೆದರಿಕೆಯಾಗಿದೆ. ಮಹಿಳೆಯರು ರಾತ್ರಿವೇಳೆಯಲ್ಲಿ ಸಂಚರಿಸುವುದಕ್ಕೂ ಹೆದರಿಕೆ ಅನುಭವಿಸುತ್ತಿದ್ದಾರೆ ಎಂದು ಸಂಘಟನಾಕಾರರು ಆತಂಕ ವ್ಯಕ್ತಪಡಿಸಿದರು. ಈ ಅಕ್ರಮ ದಂಧೆಗಳ ನೇರ ಪರಿಣಾಮವಾಗಿ ಹಟ್ಟಿ ಪಟ್ಟಣದಲ್ಲಿ ಕಳ್ಳತನ, ಕೊಲೆ, ಅತ್ಯಾಚಾರ ಸೇರಿದಂತೆ ಗಂಭೀರ ಅಪರಾಧ ಪ್ರಕರಣಗಳ ಪ್ರಮಾಣ ಹೆಚ್ಚಾಗಿದೆ.

ಮಟಕಾ, ಬೆಟ್ಟಿಂಗ್, ಗಾಂಜಾ ಹಾಗೂ ಲಿಕ್ಕರ್ ಮಾಫಿಯಾಗಳ ಬಲೆಗೆ ಸಿಲುಕಿರುವ ಯುವಕರು ದಿನನಿತ್ಯದ ಖರ್ಚಿಗೆ ಹಣದ ಅವಶ್ಯಕತೆ ಬಿದ್ದಾಗ ಕಳ್ಳತನ, ರಾಬರಿ, ಕೊಲೆ-ಸುಲಿಗೆಗಳ ಕಡೆ ತಿರುಗುವುದು ಸಾಮಾನ್ಯ ಘಟನೆವಾಗುತ್ತಿದೆ ಎಂದರು. ಪಟ್ಟಣದ ಪೊಲೀಸ್ ಠಾಣೆ ಕೂಗಳತೆ ದೂರದಲ್ಲೇ ಮುಖ್ಯ ರಸ್ತೆಯಲ್ಲಿ ಕೂತು ಮಟಕಾ ಬರೆದರೂ ಯಾವುದೇ ಕ್ರಮಗೊಂಡಿಲ್ಲ ಹಾಗೂ ತೊಂದರೆ ಹೇಳಿಕೊಂಡು ಠಾಣೆಗೆ ಬಂದ ಕುಟುಂಬಸ್ಥರ ಮೇಲೆಯೇ ಠಾಣೆಯ ಸಿಬ್ಬಂದಿ ಕೆಲವೊಮ್ಮೆ ದೌರ್ಜನ್ಯವೆಸಗಿರುವ ಘಟನೆಗಳು ಠಾಣೆಯಲ್ಲಿ ನಡೆದಿವೆ. ಕೂಡಲೇ ಪಟ್ಟಣ ಶಾಂತಿ,ಮಹಿಳೆಯರ ಭದ್ರತೆ ಮತ್ತು ಯುವಕರ ಭವಿಷ್ಯಕ್ಕಾಗಿ ತಕ್ಷಣವೇ ಇಂತಹ ಅಕ್ರಮ ದಂಧೆಗಳಿಗೆ ಕಡಿವಾಣ ಹಾಕಬೇಕೆಂದುಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಾಹೇರಾ ಬೇಗಂ, ರಮೇಶ ವೀರಾಪುರ, ವನಜಾಕ್ಷಿ, ಪಂಚಲಯ್ಯ , ಹಾಜಿಬಾಬು ಕಟ್ಟಿಮನಿ, ಶಂಶುದ್ದೀನ್, ಅಲ್ಲಾಭಕ್ಷ ದೇವರಭೂಪುರು ಸೇರಿದಂತೆ ಇತರರು ಇದ್ದರು.

## ಕನ್ನಡ ಪುಸ್ತಕ ಪ್ರಾಧಿಕಾರಯುವ ಬರಹಗಾರರ ಚೊಚ್ಚಲ ಕೃತಿಗಳನ್ನುಪ್ರಕಟಿಸಲು ಪ್ರೋತ್ಸಾಹಧನಕ್ಕಾಗಿ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 04 (ಕರ್ನಾಟಕ ವಾರ್ತೆ): ಕನ್ನಡ ಪುಸ್ತಕ ಪ್ರಾಧಿಕಾರದಿಂದ 2025-26 ನೇ ಸಾಲಿನ ಯುವ ಬರಹಗಾರರ ಚೊಚ್ಚಲ ಕೃತಿಗಳನ್ನು ಪ್ರಕಟಿಸಲು ಪ್ರೋತ್ಸಾಹಧನ ನೀಡುವ ಸಲುವಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಯ್ಕೆಯಾದ 50 ಯುವ ಬರಹಗಾರರ ಹಸ್ತ ಪ್ರತಿಗಳ ಪ್ರಕಟಣೆಗೆ ಮಾತ್ರ ರೂ.15,000 ಗಳ ಪ್ರೋತ್ಸಾಹಧನ ನೀಡಲಾಗುವುದು. ಅರ್ಜಿದಾರರು 18 ರಿಂದ 40 ವರ್ಷ ವಯೋಮಿತಿಯವರಾಗಿರಬೇಕು.**

ಸ್ವ-ವಿವರವುಳ್ಳ ಪ್ರಾಧಿಕಾರದ ಅರ್ಜಿ ನಮೂನೆಯೊಂದಿಗೆ ದೃಢೀಕೃತ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರದ ಪ್ರತಿ ಅಥ-ವಾ ಅಧಿಕೃತವಾದ, ದೃಢೀಕರಿಸಲ್ಪಟ್ಟ ಜನ್ಮ ದಾಖಲಾತಿ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸಬೇಕು. ಅಲ್ಲದೆ ಪ್ರಸ್ತುತ ಸಲ್ಲಿಸಲ್ಪಡುತ್ತಿರುವ ಕೃತಿಯು ತಮ್ಮ ಚೊಚ್ಚಲ ಕೃತಿಯಾಗಿದ್ದು, ಎಲ್ಲಿಯೂ ಪ್ರಕಟವಾಗಿಲ್ಲವೆಂದು ಸ್ವಯಂ ದೃಢೀಕರಣ ನೀಡಬೇಕು. ಆಯ್ಕೆಗಾಗಿ ಸಲ್ಲಿಸುವ ಹಸ್ತ ಪ್ರತಿಯು ಡಿ.ಟಿ.ಪಿ. ಮಾಡಿಸಿದಾಗ 1/8 ಡೆಮ್ಮಿ ಅಳತೆಯಲ್ಲಿ ಕನಿಷ್ಠ 60 ಪುಟಗಳಿರಬೇಕು. ಅನುವಾದ, ಪಠ್ಯಪುಸ್ತಕ ಹಾಗೂ ಬೇರಾವುದೇ ಪದವಿ, ಸ್ನಾತಕೋತ್ತರ ಪದವಿ (ಪಿಎಚ್‌ಡಿ) ಗೆ ಸಿದ್ಧಪಡಿಸಿದ ಸಂಶೋಧನಾ ಪ್ರಬಂಧಗಳನ್ನು ಹೊರತುಪಡಿಸಿ, ಕಥೆ, ಕಾದಂಬರಿ, ಕವನ, ನಾಟಕ, ವಿಮರ್ಶಾ ಲೇಖನ, ಪ್ರಬಂಧ ಮುಂತಾದ ಕನ್ನಡ ಸಾಹಿತ್ಯ ಪ್ರಕಾರಗಳಿಗೆ ಸಂಬಂಧಿಸಿದಂತೆ ಹಸ್ತ ಪ್ರತಿ ಇರಬೇಕು.

ಕೃತಿಯ ಪಠ್ಯದಲ್ಲಿ ಯಾವುದೇ ಧರ್ಮ, ದೇವರು, ಜಾತಿ, ಕೋಮು, ವೃತ್ತಿ, ಸಮುದಾಯ, ಭಾಷೆ, ಆಚರಣೆ, ಪದ್ಧತಿ, ಇತ್ಯಾದಿ ಸಂಗತಿಗಳಿಗೆ ಸಂಬಂಧಿಸಿದಂತೆ ಹಾಗೂ ರಾಷ್ಟ್ರೀಯ ನಾಯಕರುಗಳ ಕುರಿತಂತೆ ನೇರವಾಗಿಯೇ ಆಗಲಿ ಅಥವಾ ಪರೋಕ್ಷವಾಗಿಯೇ ಆಗಲಿ ಮನನೋಯಿಸುವಂತಹ ವಿಷಯವಾಗಲಿ ಇರಬಾರದು. ಅಲ್ಲದೆ ರಾಷ್ಟ್ರೀಯ ಭಾವೈಕ್ಯತೆಗೆ ಧಕ್ಕೆ ತರುವಂತಹ ವಿಷಯ, ಸಂಗತಿಗಳು ಪ್ರಸ್ತಾಪವಾಗಿರಬಾರದು. ಪ್ರಾಧಿಕಾರಕ್ಕೆ ಸಲ್ಲಿಸಲ್ಪಡುವ ಅರ್ಜಿಗಳೊಂದಿಗಿನ ಹಸ್ತ ಪ್ರತಿಗಳನ್ನು ಹಿಂದಿರುಗಿಸಲಾಗುವುದಿಲ್ಲ. ಆದ್ದರಿಂದ ತಮ್ಮ ಮೂಲ ಹಸ್ತ ಪ್ರತಿಯ ಒಂದು ಪ್ರತಿಯನ್ನು ತಮ್ಮ ಬಳಿಯೇ ಇಟ್ಟು ಕೊಳ್ಳುವುದು. ಅರ್ಜಿಗಳೊಂದಿಗೆ ಡಿ.ಟಿ.ಪಿ. ಮಾಡಿದ ಹಸ್ತ ಪ್ರತಿಯನ್ನು ಹಸ್ತ ಪ್ರತಿಯನ್ನು ಡಿಸೆಂಬರ್ 24ರ ಸಂಜೆ 5.30 ಗಂಟೆಯೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡಭವನ, ಜೆ.ಸಿ.ರಸ್ತೆ, ಬೆಂಗಳೂರು-560002 ಅವರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕನ್ನಡ ಪುಸ್ತಕ ಪ್ರಾಧಿಕಾರದ ವೆಬ್‌ಸೈಟ್ ವಿಳಾಸ: www.kannadapustakapradhikara.com ಅಥವಾ ದೂರವಾಣಿ ಸಂಖ್ಯೆ: 080-22484516, 22107704ಗೆ ಸಂಪರ್ಕಿಸಬಹುದು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ಕ್ರೀಡಾ ಪ್ರಶಸ್ತಿ, ನಗದು ಪ್ರೋತ್ಸಾಹಧನಕ್ಕೆ ಅರ್ಜಿ ಸಲ್ಲಿಸಲು ಡಿಸೆಂಬರ್ 10ರವರೆಗೆ ಅವಧಿ ವಿಸ್ತರಣೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 04 (ಕರ್ನಾಟಕ ವಾರ್ತೆ): ಇಲ್ಲಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 2024ರ ಏಕಲವ್ಯ ಮತ್ತಿತರ ಕ್ರೀಡಾ ಪ್ರಶಸ್ತಿ ಹಾಗೂ ನಗದು ಪ್ರೋತ್ಸಾಹಧನಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಯ ಅವಧಿಯನ್ನು ಡಿಸೆಂಬರ್ 10ರವರೆಗೆ ವಿಸ್ತರಿಸಲಾಗಿದೆ.**

ಅರ್ಹ ಕ್ರೀಡಾಪಟುಗಳು ಪ್ರಶಸ್ತಿಗಳಾದ ಏಕಲವ್ಯ ಪ್ರಶಸ್ತಿ 2024, ಜೀವಮಾನ ಸಾಧನೆ ಪ್ರಶಸ್ತಿ 2024, ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ 2024, ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ 2024, ಗುರಿ ಒಲಂಪಿಕ್ ಪದಕ 2025-26, ನಗದು ಪುರಸ್ಕಾರ 2023 ಮತ್ತು 2024 ಶೈಕ್ಷಣಿಕ ಶುಲ್ಕ ಮರು ಪಾವತಿ 2025-26, ಕ್ರೀಡಾ ವಿದ್ಯಾರ್ಥಿ ವೇತನ 2025-26ರ ಕ್ರೀಡೆಗಳಿಗೆ ವೆಬ್‌ಸೈಟ್ ವಿಳಾಸ: https://sevasindhuservices.karnataka.gov.in ರ ಮೂಲಕ ಅಂತಿಮ ದಿನಾಂಕದೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಜಿಲ್ಲಾ ಕ್ರೀಡಾಂಗಣ ರಾಯಚೂರು ಇವರನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.